# ಅನಿಕೇತನ

## “ನಮಸ್ತೇ!”

ಮಾಗಿಯ ಬೆಳಗಿನ ಮನೆಮುಂದಣ ತೋಟದ ದಿಕ್ಕು;
ಮುಚ್ಚಿದ ಬಾಗಿಲ ತೆರೆದೊಡನೆಯೆ ಹಾ ತೆಕ್ಕನೆ ಬಗೆಮಿಕ್ಕು
ಸ್ತಂಭಿತನಾದೆನು ಸಾಕ್ಷಾತ್ಕಾರದ ದಿವ್ಯಾಘಾತಕೆ ಸಿಕ್ಕು,
ಮೇಲ್ವಾಯ್ದುಪ್ಪಳಿಸಿರ್ದ ರಸಾನಂದ ಸಮುದ್ರಂಬೊಕ್ಕು!
ಮೂಡುವ ನೇಸರ ಲೀಲಾರಶ್ಮಿ
ಗುರುಸಾಕ್ಷಿಯ ಮಂತ್ರಿಸುತಿರ್ದುದು “ಅಹಮಸ್ಮಿ!”
ಸೌಂದರ್ಯದ ಇಂದ್ರಾಣಿ,
ಉದ್ಯಾನದ ರಾಣಿ,
ಭಗವಂತನ ಭರವಸೆ, ವಾಣಿ,
ಆಶ್ವಾಸನೆ, ಆಕರ್ಷಣೆ,
ಆಲಿಂಗನೆ, ಆಸ್ವಾದನೆ,
ಕಣ್ಮನ ಹೃದಯಂಗಳ ಚುಂಬಿಸಿ,
ಶ್ರದ್ಧೆಯ ಧೈರ್ಯದಿ ಜೀವನ ನಂಬಿಸಿ,
ಕೃಪೆಯನು ಬಿಂಬಿಸಿ, ಬಾಳನು ತುಂಬಿಸಿ,
ತೋಟದೊಳರಳಿದ ಹೂ ತಾನಾದುದು ಶ್ರೀಮದ್ ಭಗವದ್ಗೀತೆ;
ಕಂದನ ಕರುಣಿಸಲವತರಿಸಿಹ ಶ್ರೀಸೌಂಧರಿ ತ್ರಿಜಗನ್ಮಾತೆ!
ಅನಿಚ್ಛನ್ನಪಿ ಕೈಮುಗಿದೆಂದೆ ಗುಲಾಬಿಗೆ: “ನಮಸ್ ತೇ!”

೨-೨-೧೯೫೦

# ಅತೀಂದ್ರಿಯ

ಅಂದು
ತಾನ ತಾನ ಗಾನದಿಂದೆ
ಕಾನನಗಳನೊದಿದೆ:

ಇಂದು
ಕಾನನಗಳೆ ಗಾನವಾಗಿ
ತಾನ ತಾನ ಮೂಡಿವೆ!

ತೆರೆ ತೆರೆ ತೆರೆ ಮಲೆ ಹೊಳೆ ತೊರೆ
ಮೂಡುತಿಹವು ರಾಗದಿ;
ಪರ್ವತಗಳೆ ಪದಗಳಂತೆ
ಗಾನಗೊಂಡು ಗೇಯಮಾಗೆ
ನುಗ್ಗುತಿಹವು ವೇಗದಿ!

ನಾಳ ನಾಳ ನಾಳದಲ್ಲಿ,
ಬಿಂದು ಬಿಂದು ನೆತ್ತರಲ್ಲಿ,
ಕಂದರಾದ್ರಿ ವಿಪಿನ ಪಂಕ್ತಿ
ಸ್ಪಂದಿಸುತಿವೆ ಯೋಗದಿ!

೧-೪-೧೯೪೫

# ಹೂವಿನ ತೋಟದಲ್ಲಿ ಪುಷ್ಪಸಮಾಧಿ!

ಹೂವು! ಹೂವು! ಹೂವು! ಹೂವು!
ಮೇರುದಂಡದೆನ್ನ ಸಾವು
ಸುರುಳಿ ಬಿಚ್ಚಿತೆನಲು ಹಾವು,
ಅರಳುವಂತೆ ಸೊಗದ ನೋವು

ಅಲರುತಿಹುದು ಮಿದುಳ ಹೂವು!
ಅತ್ತಲಿತ್ತ ಸುತ್ತಲೆತ್ತ
ಹೂವು! ಹೂವು! ಹೂವು! ಹೂವು!
ಉಸಿರು ಒಡಲು ಎಲ್ಲ ಹೂವು!

ಕೆಂಪಿನೆಡೆಯೊಳಾನು ಕೆಂಪು;
ನೀಲಿಯೆಡೆಯೊಳಾನು ನೀಲಿ;
ಬಣ್ಣ ಬಣ್ಣವೀ ಕುವೆಂಪು
ತಾನೆ ನೋಳ್ಪ ನೋಟವಾಗಿ
ಹೂವಿನೊಂದು ತೋಟವಾಗಿ
ವರ್ಣ ಜಲಧಿಯಲ್ಲಿ ತೇಲಿ
ಮುಳುಗಿ ರಸ ಸಮಾಧಿಯಲ್ಲಿ
ಮೃತವ ದಾಂಟಿ ಅಮೃತವೀಂಟಿ
ಹೂವು! ಹೂವು! ಹೂವು! ಹೂವು!
ಹೂವು! ಹೂವು! ಹೂವು!…….

೨೨-೯-೧೯೫೦

## ಹೂವಿನ ತೋಟದಲ್ಲಿ

ಬಣ್ಣದ ರೂಪದಿ ಭಗವತ್ ಪ್ರೇಮ
ಕಣ್ಣು ಚುಂಬಿಸಿದೆ!

ಬಿಂಬಾಧರದಾ ಸೃಷ್ಟಿಯ ಹೃದ್‌ರತಿ
ಜ್ವಾಲಾ ವರ್ಣದ ಲೀಲಾ ಪರ್ಣದಿ
ಓಷ್ಠಾಗ್ನಿಯ ಪ್ರತಿಬಿಂಬಿಸಿದೆ!

ಕಬ್ಬಿಗೆನೆದೆಯಲಿ ಶ್ರದ್ಧಾನಂದಂ
ಅಗ್ನಿಯ ಬುಗ್ಗೆಯೊಲುಕ್ಕುತೆ ಧಗ್ಗನೆ
ಪ್ರಾಣ ಸಮುದ್ರಂ ಜೃಂಭಿಸಿದೆ!

ದೇವಾಲಯವೀ ಹೂವಿನ ತೋಟಂ!
ರಸ ಸಾಧನೀಯ ಯೋಗದ ನೋಟಂ!
ಜೀವನ ದೇವನ ಈ ಹೂಬೇಟಂ!
ಮೂಲೋಕವನಾಲಿಂಗಿಸಿದೆ!
ಭಗವದ್ ಭೋಗದ ಈ ಜೇನೂಟಂ
ತೃಷ್ಣೆಯ ಬೇರನೆ ಭಂಗಿಸಿದೆ!
ಇಂದ್ರಿಯಗಳನುಲ್ಲಂಘಿಸಿದೆ!
ನಾನೆಂಬಬುಧಿಯನಿಂಗಿಸಿದೆ!

೨೭-೧೦-೧೯೪೯

## ಸೌಂದರ್ಯಾಜಿ

ಮನೆಯ ಉದ್ಯಾನದಲ್ಲಿ

ಬನ್ನಿ, ಓ ಬಾನಲೆವರೆ, ನಮ್ಮ ತೋಟಕೆ,
ನಂದನವನೆ ಮೀರಿಸುವೀ ದಿವ್ಯನೋಟಕೆ.
ಬನ್ನಿ ಸೌಂದರ್ಯರಸದ ಅಮೃತದೂಟಕೆ,
ಅಲೋಕಸುಖವನೀವ ಈ ಲೋಕಪೀಠಕೆ:

ಕವಿಯ ಮನೆಯ ಅಂಗಳ
ದಿವಿಜರಿಗೂ ಮಂಗಳ!
ಸರಸ್ವತಿಯ ಕಂದನ
ಮನಕೆ ಮಿಗಿಲೆ ನಂದನ?

ಅಲ್ಲಿ ಪಂಕ್ತಿ ಸೂರ್ಯಕಾಂತಿ; ಇಲ್ಲಿ ಪನ್ನೇರಿಳೆ;
ಅಲ್ಲಿ ಹೊಂಗುಲಾಬಿ ಹಂತಿ; ಇಲ್ಲಿ ಚೆನ್ನ ವೂಮಳೆ;
ಇಲ್ಲಿ ಕೆಂಪು; ಅಲ್ಲಿ ಹಳದಿ; ಹಸುರು, ಪಚ್ಚೆ, ನೀಲಿ;
ಹೊಸತೆ ಬಂತೊ ತಾಯ ಹರಕೆ ಹೂವ ರೂಪ ತಾಳಿ!

ಕೋಕಿಲಾದಿ ಕೂಜನ;
ಸ್ಫಟಿಕಪುಷ್ಪ ಲಾಝನ;
ಸರ್ವಸೃಷ್ಟಿಯ ಸರ್ವಸುಖಕೆ
ಸತ್ಯ ಶಿವ ಸೌಂದರ್ಯಮುಖಕೆ
ಕವಿಯ ಯಾಜನಃ

ಕವಿಹೃದಯದ ಕರುವೀಂಟುವ ಸೃಷ್ಟಿಗೋ ಪಯೋಧರ
ಸೊರಸುವಮೃತ ಮಧುವಿಗೆಣೆಯೆ ನಿಮ್ಮ ಅಪ್ಸರಾಧರ?
ಓ ದಿವ್ಯ ಚೇತನಗಳೆ,
ಇಳಿದು ಬನ್ನಿ, ಬನ್ನಿ!ಇಳಿಯೆ ನೀವು ಅಳಿಯೆ ನೋವು
ಬುವಿಗೆ ದಿವಿಯ ತನ್ನಿ!
ಕವಿಯ ಕಾಣ್ಬ ಸವಿಯೆ ನನ್ನಿ;
ತಿಳಿಯೆ ನಾವು,
ಬುವಿಯೆ ದಿವಿ ಎನ್ನಿ!
ಕವಿರಸಾನುಭವದ ಸೇತುವಿಂ
ಪ್ರವಾಹವಿಳಿದು ಬನ್ನಿ!
ಬನ್ನಿ, ಓ ಬನ್ನಿ.
ದಿವಿಯನುಳಿದು ಕವಿಯ ಬುವಿಯ ದಿವ್ಯದಿವಿಗೆ ಬನ್ನಿ!

೧೪-೯-೧೯೫೪

## ಹಕ್ಕಿಗಳ ಸಂಗದಲಿ

ಹಕ್ಕಿಗಳ ಸಂಗದಲಿ
ರೆಕ್ಕೆ ಮೂಡುವುದೆನಗೆ;
ಹಾರುವುದು ಹೃತ್ಪಕ್ಷಿ
ಲೋಕಗಳ ಕೊನೆಗೆ!

ಹಾರಿ ಲೋಕದ ಕೊನೆಗೆ,
(ರಸದ ಪೈರಿನ ಮನೆಗೆ,)
ಬಾಣದಂತೆರಗುವುದು
ಹಾಲು ಜೇನ್ದನೆಗೆ!

ಅಲ್ಲಿ ಮೂಡುವನು ರವಿ:
ಆದರೀ ರವಿಯಲ್ಲ!
ಅಲ್ಲಿ ಹಾಡುವನು ಕವಿ:
ಈ ಕವಿಯು ಅಲ್ಲ!

ಕೇಳಿದರೆ, ಹೃತ್ಪಕ್ಷಿ
ಮೌನವನೆ ಹಾಡುವುದು!
ಮೂಕ ಸುಂದರ ಅಕ್ಷಿ
ಎದೆಯ ಕಾಡುವುದು!

೧೮-೬-೧೯೩೭

## ಸೋಹಮಸ್ಮಿ!

"ಅಹಮಸ್ಮಿ ಅಹಮಸ್ಮಿ ಅಹಂ ಅಸ್ಮಿ!"
ಆಶೀರ್ವದಿಸುತ್ತೈತಂದನ್ಯೆ ಮಹರ್ಷಿ,
ವೈಶಾಖ ಉದಯ ದಿನಮಣಿ ಅರಶ್ಮಿ.

ದೇವ ಧೈರ್ಯಾಮೃತವ ಜೀವಲೋಕಕ್ಕೆರೆದು
ಮರ್ತ್ಯಕೆ ಅಮರ್ತ್ಯದ ಗವಾಕ್ಷಮಂ ಕೊರೆದು,
ಕೆಂಗೆಂಡದುಂಡೆಯೋಲ್
ದಿವ್ಯಾಗ್ನಿ ಕುಂಡದೋಲ್
ದೇವರೂರ್ ಪ್ರತ್ಯಕ್ಷ ರುಂಡದೋಲ್
ಮೂಡಿದನ್!

ಮೂಡಿದನೆ?
ಮೈದೋರಿದನು ಮಹರ್ಷಿ,
ದಿನಲಮಣಿ ಅರಶ್ಮಿ!
ದಿಗ್ಗಜದ ಬೆನ್ನೇರಿ
ಇಂಧ್ರಾದ್ರಿಯನ್ನೇರಿ
ಶಿಖರರೂಪದ ಮುಗಿಲ ತೇರನೇರಿ
“ಅಹಮಸ್ಮಿ ಅಹಮಸ್ಮಿ ಅಹಂ ಅಸ್ಮಿ!”
ಎಂಬ ಆಶೀರ್ವಾದಮಂ ಲೋಕಲೋಕಕೆ ಸಾರಿ
ಮೈದೋರ್ದನದೊ ಮಹರ್ಷಿ ದಿನಮಣಿ ಅರಶ್ಮಿ!
ಸೃಷ್ಟಿದೇವಿಯ ವಕ್ಷ ಮೃದುತಲ್ಪದಲಿ ನಿಂತು
ದೃಷ್ಟಿಪೂಜೆಯ ಸಲಿಸುತಿರ್ದ ಕಬ್ಬಿಗನೊಳಿಂತು
ಆಘೋಷಿಸಿತು ಉಪನಿಷತ್ತಿನ ಋಷಿಯ ಮಂತ್ರಸಪ್ತತಂತು:

“ಓಂ ಪೂಷನ್ನೇಕರ್ಷೇ
ಯಮ ಸೂರ್ಯ ಪ್ರಾಜಾಪತ್ಯ
ವ್ಯೂಹ ರಶ್ಮೀನ್ ಸಮೂಹ!
ತೇಜೋ ಯತ್ ತೇ ರೂಪಂ
ಕಲ್ಯಾಣತಮಂ
ತತ್ ತೇ ಪಶ್ಯಾಮಿಃ
ಯೋಽಸಾವಸೌ ಪುರುಷಃ ಸೋಹಮಸ್ಮಿ!”

೧೯-೪-೧೯೫೨

# ಸಿರಿ ಅಡಿ

ಪಿಡಿ, ಬಲ್ವಿಡಿ ಪಿಡಿ:
ಪೊರೆವುದು ಈ ಅಡಿ.
ಇದು ಗುರುವಿಗೆ ಪಡಿ;
ಇದು ದೇವರ ಗುಡಿ;
ಪಣೆಯಿಡು, ಪೊಡೆವಡು,
ಪಾವನವಪ್ಪುದು ನಿನ್ನ ಮುಡಿ!

ಇದು ಭವಕಾನನ
ದಾವಾಗ್ನಿಯ ಕಿಡಿ;
ಇದು ಸುಜ್ಞಾನದ
ಸನ್ಮಂತ್ರದ ನುಡಿ:
ವೈಕುಂಠದ ತಡಿ;
ಕೈಲಾಸದ ಗಡಿ!
ಪಣೆಯಿಡು, ಪೊಡೆವಡು,
ಆಶ್ರಮವಪ್ಪುದು ನಿನ್ನ ಮುಡಿ!

ಇದಕರ್ಪಿಸೆ ದುಡಿ;
ಇದನೊಪ್ಪಿಸೆ ಮಡಿ!
ಈ ಪೂವಡಿಯೊಳ್
ನೀನಾರಡಿಯೊಲ್
ನಿತ್ಯಾನಂದದ
ನಿಜಮಕರಂದದ
ಭಗವನ್ ಮಧುವನ್ ಬಯಸಿ ಕುಡಿ !
ಪೂಜಾತೀರ್ಥದಿ ಮಿಂದು ಕುಡಿ!
ಭಕ್ತಿಯ ರಸವನ್ ಈಂಟಿ ಕುಡಿ!
ಶ್ರದ್ಧೆಯ ಜೇನನ್ ನಂಬಿ ಕುಡಿ!
ಪ್ರೇಮಾಮೃತವನ್ ತುಂಬಿ ಕುಡಿ!

೮-೧-೧೯೫೧

# ಅನಿಕೇತನ

ಓ ನನ್ನ ಚೇತನ,
ಆಗು ನೀ ಅನಿಕೇತನ!

ರೂಪ ರೂಪಗಳನು ದಾಟಿ,
ನಾಮ ಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ,
ಓ ನನ್ನ ಚೇತನ, ಆಗು ನೀ ಅನಿಕೇತನ!

ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ, ಆಗು ನೀ ಅನಿಕೇತನ!

ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು!
ಓ ನನ್ನ ಚೇತನ,
ಆಗು ನೀ ಅನಿಕೇತನ!

ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ;
ಅನಂತ ನೀನ್ ಅನಂತವಾಗು:
ಆಗು, ಆಗು, ಆಗು, ಆಗು,
ಓ ನನ್ನ ಚೇತನ,
ಆಗು ನೀ ಅನಿಕೇತನ!

೨೦-೧-೧೯೫೨

# ನಿವೃತ್ತಿಮುಕ್ತನ ಅಭೀಪ್ಸೆ*

ಮುಕ್ತನಾದೆ, ಇಂದು, ಜೀವನ್

ಮುಕ್ತನಾದೆ;- ಗುರುವೆ, ನಿಮ್ಮ
ದೇವಕೃಪೆಯಿಂದೆ!

ಒಂದು ಕೈಯಲಿ ಕೆಲಸ; ಒಂದು ಕೈಯಲಿ ಪಾದ;
ಕರ್ಮಪೂಜೆಗಳೆರಡನೆಸಗುತ್ತ ಬಂದೆ.
ಇಂದಿನಿಂದೆರಡುಕೈಯೊಳೂ ನಿಮ್ಮ ಕಾಲ್ವಿಡಿದು
ಸಾಧನೆಯ ಕೈಕೊಳೆ ಅನುಗ್ರಹಿಸು, ತಂದೆ.

ಸ್ಥಾನದ ಉಪಾಧಿ, ಅಧಿಕಾರದ ಉಪಾಧಿ,
ಮಾನದ ಉಪಾಧಿ, ಅವಮಾನದ ಉಪಾಧಿ,
ವಿದ್ಯೆಯ ಉಪಾಧಿ, ಕೀರ್ತಿಯ ಉಪಾಧಿ,
ಕವಿಯ, ಸಾಹಿತಿಯ, ಕಡೆಗೆ ಕನ್ನಡ ಉಪಾಧಿ;
ನಿನ್ನಡಿಗೆ ಸರ್ವವ ಸಮರ್ಪಿಸಲು ಬಂದೆ;
ಕೈಹಿಡಿದು ಕೃಪೆಗೆಯ್, ಅನುಗ್ರಹಿಸು, ತಂದೆ!

ನೀವೆನ್ನ ಕೈವಿಡಿಯೆ ನಾ ನಿಮ್ಮ ಕಾಲ್ವಿಡಿದು
ಪಯಣದಲಿ ತಿಪ್ಪತಿಪ್ಪನೆ ನಡೆವ ಮುಂದೆ:
ಅಂದು ದೀಕ್ಷೆಯನಿತ್ತು ಧೈರ್ಯವನೆರೆದ ತಂದೆ,
ಎತ್ತಿಕೋ; ಒತ್ತಿಕೋ ತಾಯೆದೆಗೆ ಇಂದೇ!

---

* ೧೬-೧೨-೧೯೫೫ರಲ್ಲಿ ನಿವೃತ್ತನಾಗಲಿದ್ದಾಗ ಅರ್ಪಿಸಲೆಂದು ಬರೆದ ಪ್ರಾರ್ಥನೆ.

# ಶ್ರದ್ಧೆಗಿಹುದೆ ಅಶಿವ ಭೀತಿ?

ಸರ್ವಮಂಗಳೆ ನೀನೆ
ಪರಮ ಮಂಗಳಕಾಗಿ
ವಿಶ್ವದ ವಿಕಾಸನದ
ಲೀಲೆಯಲಿ ತೊಡಗಿರಲು
ಅರಿವಿನನುಭವಕಿಹುದೆ
ಅಮಂಗಳದ ಭೀತಿ?

ಕಷ್ಟದಲಿ ಸುಖದಲ್ಲಿ
ನಷ್ಟ ನಾಶಗಳಲ್ಲಿ
ದುಷ್ಟರಲಿ ಶಿಷ್ಟರಲಿ
ಇಷ್ಟದೊಳನಿಷ್ಟದಲಿ
ಸಿದ್ಧಿ ಹೊಂದುತಲಿರಲು
ನಿನ್ನಮೃತ ನೀತಿ
ಶ್ರದ್ಧೆಯಿಹ ಧೃತಿಗಿಹುದೆ
ಹೇಳ್ ಅಶಿವ ಭೀತಿ?

ಸರ್ವನಾಶದ ಮಧ್ಯೆ
ಆಶಾವಾದಿ ಶ್ರದ್ಧೆ:
ಕನಸು ಕಾಣುವ ನಿದ್ದೆ
ಓಲ್ ಈ ಅವಿದ್ಯೆ
ತಾನಲ್ತೆ ರಸಲೀಲೆ
ಎಚ್ಚೆತ್ತ ಮೇಲೆ!

೨೦-೧೧-೧೯೪೫

# ಪೂಜಿಸುವರೆಲ್ಲರೂ ಪೂಜ್ಯರೆನಗೆ

ಪೂಜಿಸುವರೆಲ್ಲರೂ ಪೂಜ್ಯರೆನಗೆ:
ಪೂಜ್ಯರನು ಪೂಜಿಸುವುದೂ ಪೂಜೆ ನಿನಗೆ! ॥

ಧ್ಯಾನಿಸಲು ನಿನ್ನನದೆ ಪರಮಲೋಕೋಪಕಾರ;
ನಿನ್ನ ನೆನೆವುದೆ ನರಗೆ ಸರ್ವೋತ್ತಮ ಸದಾಚಾರ.
ಜೀವನೋದ್ದೇಶ ತಾನಾತ್ಮ ಸಾಕ್ಷಾತ್ಕಾರ:-
ಬದ್ಧಜೀವಿಗೆ ತನ್ನ ಸಾನ್ನಿಧ್ಯದಾನಕಿಂ
ಮಿಗಿಲಿಹುದೆ ಸಿದ್ಧಗೆ ಪರೋಪಕಾರ? ॥ ೧ ॥

ಅನ್ನದಾನದ ಹಿರಿಮೆ ತಾನನ್ನಮಯಕೆ;
ಪ್ರಾಣದಾನದ ಹಿರಿಮೆ ತಾಂ ಪ್ರಾಣಮಯಕೆ
ಜ್ಞಾನದಾನದ ಹಿರಿಮೆ ತಾಂ ಮನೋಮಯಕೆ;
ಎಲ್ಲವನು ಮೀರುವಧ್ಯಾತ್ಮ ದಾನದ ಹಿರಿಮೆ
ವಿಜ್ಞಾನದಾನಂದಮಯಕೆ.
ಇನ್ನದಕೆ ಪಿರಿದಿಹುದೆ ಲೋಕಸಂಗ್ರಹ ಕಾರ್ಯ,
ಜರಾ ಮರಣ ಶೋಕ ಲಯಕೆ? ॥ ೨ ॥

ಋಷಿಯ ಆಲೋಚನೆಯೆ ಋತಚಿತ್ ತಪಶ್ಯಕ್ತಿ;
ಮುಕ್ತನ ಮನೋರಥವೆ ಜಗತ್ ಕಲ್ಯಾಣ ಪಥ;
ಈಶ್ವರ ಧ್ಯಾನವದೆ ತಾನೀಶ್ವರೀ ಶಕ್ತಿ;
ಸರ್ವಾತ್ಮ ಸಾಧನೆಯೆ ಸರ್ವ ಸೇವಾವ್ರತ:
ಪರ್ವತ ಗುಹಾವಾಸಿ ತಾನೊರ್ವನಾದರೂ
ಸರ್ವ ಭೂತ ಹಿತೇ ರತ! ॥ ೩ ॥

೨೮-೨-೧೯೪೭

## ದೀಕ್ಷಾ ಶ್ರದ್ಧೆ

ಕಂಡವರನು ಕಂಡಿಹೆ ನಾ ಧನ್ಯ:
ಕಂಡವರನು ಕಾಣುವುದೂ ಮೋಕ್ಷಂಕರ ಪುಣ್ಯ!

ಕಡವರದೊಡವೆಯ ಬೆಲೆಯರಿಯದೆ ಹೋಗಿದ್ದೆ;
ಕಡವರವಿದ್ದೂ ಇನಿತೂ ದಿನವೂ ಬಡವನೆ ಆಗಿದ್ದೆ:
ಆತ್ಮವನೆನಗಿತ್ತಾತನ ಸಂಪತ್ತನು ನಾ ಮರೆತಿದ್ದೆ!

ಅದೆಂತಹ ಗುರುಕರುಣೆಯ ತೀರ್ಥದಿ ನಾ ಮಿಂದು
ಅದೆಂತಹ ಗುರುದಯೆ ತೊಟ್ಟಿಲೊಳಾಂ ಮಲಗಿಹೆನೆಂದು
ಗುರುಕೃಪೆಯಿಂಧನುಭವಿಸರಿತೆನು ನಾನಿಂದು!

ಕಲ್ಪತರುವೆ ತಾ ಕಂಭವಾಗಿರುವ ಕಾಮಧೇನುವಿಗೆ ಕರುವಾದೆ:
ಸಚ್ಚಿದಾನಂದ ನಿಚ್ಚ ತಾನಾದ ಪರಮ ಗುರುದೇವ ದಿವ್ಯಬೋಧೆ
ನಿತ್ಯನಿತ್ಯವೂ ಸತ್ಯವಾದವನ ಚರಣತಲದಿ ನಾ ಶರಣಾದೆ.
ಕಂಡ ಗುರುವರನ ಕಂಡು ಕಾಲ್ಮುಟ್ಟಿ
ಕೊಂಡು ದೀಕ್ಷೆಯನು ಧನ್ಯನಾದೆ!

೧೭-೩-೧೯೪೭

## ಎಚ್ಚರಿಸು ಬಾ, ಗುರುವೆ!

ಎಚ್ಚರಿಸು ಬಾ, ಗುರುವೆ, ಚಿಚ್ಚರಣ ಕಿರಣದಲಿ
ಬಿಚ್ಚರಳುವಂತೆನ್ನ ಹೃದಯದಕ್ಷಿ;
ಚರಿಸು ಬಾ ಚೇತನದಿ ಗರಿಗೆದರುವಂತೆನ್ನ
ಪ್ರಾಣಚಂಚುವಿನಗ್ನಿ ಪಕ್ಷಿ;
ಮಿಂಚಿ ಬಾ ಮನದಲ್ಲಿ ತಮದ ಘನತಿಮಿರ ತಾ
ಪರಿದು ದರ್ಶನವೀಯೆ ಗೂಹ್ಯಸಾಕ್ಷಿ!

ಜ್ಯೋತಿವೊನಲಾಗಿ ಬಾ ಬೆಳಗಿ , ಜಡದೊಡಲಲ್ಲಿ
ಚಿನ್ಮಯದ ಕಡಲು ಮೈದೋರುವಂಥೆ;
ಶಕ್ತಿಯೋಲಿಳಿದು ಬಾ ಇಂದ್ರಿಯಗಳಾಸಕ್ತಿ
ಭಕ್ತಿಯ ಅತೀಂದ್ರಿಯತೆಗೇರುವಂಥೆ;
ವಾಙ್ಮಾನಾತೀತವಹ ಮೌನದೋಲಿಳಿದು ಬಾ
ನನ್ನನಿತು ನಿನ್ನೊಳೆಯೆ ಸೇರುವಂತೆ,
ನಿನ್ನನಿತು ನನ್ನನಿತನೂ ಹೀರುವಂತೆ!

೭-೧-೧೯೪೮

## ಉದಾಹರಣ ನಾ

ಉದಾಹರಣ ನಾ;
ಉದಾರ ಕೃಪೆ ತಾ ಅಕೃಪಣ ಕಣಾ!

ನೆತ್ತಿ ಮೋಡವನೆತ್ತಿ ನಿಮಿರಿದಡವಿಯ ಮಲೆಯ
ತಾಯನಿತ್ತು
ಬೆಟ್ಟಬೆಟ್ಟಕೆ ಕಟ್ಟಿ ಜೋಗುಳದ ತೊಟ್ಟಿಲನು
ತೂಗಿದತ್ತು!
ದೇಶ ಆಕಾಶಗಳ ಶ್ವಾಸಕೋಶಗಳೆಸಗಿ
ಉಸಿರನಿತ್ತು
ನಾಡಿನಾಡಿಗಳಲ್ಲಿ ಕಾಡುಗಳನ್ನೆ
ಕೋಡಿ ಹರಿಸಿತ್ತು!
ಭೋಗ ಸಾಗರದಾಚೆ ಯೋಗವೇಲೆಯಮೇಲೆ
ಸಿಂಹಪೀಠವಿತ್ತು!
ಕಾವ್ಯಲೋಕದ ಭವ್ಯ ಕವಿದೇವ ಪದವಿಯಲಿ
ಪಟ್ಟಗಟ್ಟಿದತ್ತು!

೧೭-೩-೧೯೪೯

## ಮನೆದಪ್ಪುವುದೆ ಸುಮನೋರಥಂ?

ನನ್ನ ಈ ಕೋರಿಕೆಯನಧಿಕಾರದೆದುರಿನಲಿ
ನಿಂತು ಯಾಚಿಸಬೇಕೆ ಹೇಳು, ಗುರುವೆ?
ನಿನಗೆ ಸಲ್ಲಿಸೆ ಚರಾಚರಕೆಲ್ಲ ಸಲುವುದೆನೆ
ನಿನಗೊರೆವುದೂ ಬೇಕೆ, ಕಲ್ಪತರುವೆ?

ನೀನೆಳಸಿದರೆ ಪೃಥಿವಿ ಕಂಪಿಸುವುದಾಗಸದಿ
ಪಲ್ಲಟಿಸುವುದು ಸೂರ್ಯಚಂದ್ರರ ಪಥಂ!
ನಿನ್ನ ಕೃಪೆ ತಾನತ್ತಲಿನಿತೆ ತಲೆದೂಗಿದರೆ
ಮನೆದಪ್ಪುವುದೆ ನನ್ನ ಸುಮಮನೋರಥಂ?

೨೧-೧-೧೯೪೫

## ಸಂಕೇತ ಸಾಕ್ಷಿ

ಜಗನ್ಮಾತೆಯ ಆಶೀರ್ವಾದದ
ಬಾನಕ್ಷತೆ ಈ ಬೆಳ್ಳಕ್ಕಿ;
ಮನೆಯಿದಿರೇ ಹೊಲದಲಿ
ಎರಚಿದವೋಲಿದೆ ಬಿಳಿಅಕ್ಕಿ!
ಒಯ್ಯೊಯ್ಯನೆ ಅಃ ಚಲಿಸುತ್ತಿವೆ
ಸಾಲ್ ಸಾಲ್ ಸಾಲ್ ಹಾಲ್‌ಚುಕ್ಕಿ!

ಮಣ್‌ಬದುಕಿನ ಹುಳುಬಾಳಿಗೆ
ಸಂಕಟವನು ತಂದಿಕ್ಕಿ
ಹೊಟ್ಟೆಯ ಪಾಡಿಗೆ ದುಡಿಯುವ
ದಾವಣಿಯಲಿ ಸಿಕ್ಕಿ
ಚಲಿಸುತ್ತಿವೆ ದಿಟ ನಿನಗಾ
ಸಂಕುಲಪಂಕ್ತಿಯ ಬಕಪಕ್ಷಿ:

ನನಗಾದರೊ ಅವು ಬೇರೊಂದನುಭೂತಿಗೆ
ಸಂಕೇತದ ಸಾಕ್ಷಿ!

೨೩-೨-೧೯೪೭

## ಕ್ಗೂ ಕ್ಗೂ ಕ್ಗೂ!

ಕ್ಗೂ ಕ್ಗೂ ಕ್ಗು! ಕ್ಗೂ ಕ್ಗೂ ಕ್ಗು!
ಕ್ಗೂ ಕ್ಗೂ ಕ್ಗು! ಕ್ಗೂ ಕ್ಗೂ ಕ್ಗು!……
ಹೊರಸಿನುಲಿ!
ಹೊಲದ ವಾಣಿ!! ಕ್ಗೂ ಕ್ಗೂ ಕ್ಗು:

ಏನೊ ಅರ್ಥ! ಏನೊ ಧ್ವನಿ!
ಏನೊ ದರ್ಶನ!
ಬುದ್ಧಿಸ್ಪಷ್ಟವಲ್ಲ, ದಿಟ,
ಸಿದ್ಧಿ ದರ್ಶನ!
ಪೈರು ಕೊಯ್ದ ಬಯಲು ನೆಲ:
ಬೋರೆ, ದಿಣ್ಣೆ; ದಿಣ್ಣೆ, ಬೋರೆ;
ಇಲ್ಲಿ ಅಲ್ಲಿ ಪೊದೆ, ಮರ:
ಇದರ ನಡುವೆ ಉಲಿವ ಚೋರೆ!
ಕ್ಗೂ ಕ್ಗೂ ಕ್ಗು! ಕ್ಗೂ ಕ್ಗೂ ಕ್ಗು; ……

ಹೊರಸಿನುಲಿ! ಹೊಲದ ವಾಣಿ!
ಅಃ ವಿಶ್ವವಾಣಿ!!
ಎಲ್ಲಿಂದಲೊ ಹೊಮ್ಮುತ್ತಿದೆ;
ಹಕ್ಕಿಯಿಂದ ಚಿಮ್ಮುತ್ತಿದೆ;
ಕವಿ ಹೃದಯಕೆ ದುಮುಕುತ್ತಿದೆ
ರಸಜಲಪಾತದ ಘೋಷದಲಿ!
ದೈನಂದಿನ ಸಾಮಾನ್ಯದ

ನೀರಸವನೆ ಉಜ್ವಲಿಸಿದೆ
ಅತಿಇಂದ್ರಿಯ ಆವೇಶದಲಿ!

೯-೨-೧೯೫೭

## ತಾಯಿಯ ಆಶ್ವಾಸನೆ

ಏಕೆ ಬೇಸರ, ನಿನಗೂ?
ಇಲ್ಲೆ ಇಹೆನಲ್ಲ, ಮಗೂ!

ನಿನಗಾಗಿ ಈ ಹಸುರು ಹುಲ್ಲಾಗಿ
ಬಂದೆ……..
ಮತ್ತೆ…….
ಮುತ್ತಿನಿಬ್ಬನಿಯಾಗಿ
ನಿಂದೆ…….
ಅತ್ತ ರವಿಯಾಗಿ ಮೂಡಿ,
ಇತ್ತ ಕಿರಣವೆ ಆಗಿ ಆಡಿ,
ನೋಡಿಲ್ಲೆ ಮಿರುಗುತಿಹೆ
ನಿನ್ನಿದಿರಿನಲ್ಲೆ!
ಕಲ್ಪನೆಯ ಬಾಹುಗಳ ನೀಡು, ಮಗುವೆ;
ಸೌಂದರ್ಯತನುವೆನ್ನನಪ್ಪು, ಮಗುವೆಃ
ಆವೇಶದಧರದಲಿ ಮಾತೃವಕ್ಷವನೊತ್ತಿ
ಸ್ತನ್ಯದಾನಂದವನು ಈಂಟಿ ನಗುವೆ!-
ಇಲ್ಲೆ ಇಹೆನಲ್ಲ, ಮಗೂ!
ಏಕೆ ಬೇಸರ, ನಿನಗೂ?

೩-೧೦-೧೯೬೦

## ಓಂ ಅನವರತವೂ!

ಓಂ .
ಅನವರತವೂ
ನಿನ್ನ ಮಡಿಲೊಳೆಯೆ ಮಲಗಿರುವೆನೆಂಬೊಂದು
ಶಿಶುನಿರ್ಭರತೆ ನನ್ನದಾಗಿರಲಿ, ತಾಯಿ.
ಕಷ್ಟದಲಿ; ನಷ್ಟದಲಿ;
ದುಷ್ಟಪೀಡನೆಯಲ್ಲಿ;
ನಿಂದಾ ಸ್ತುತಿಗಳಲ್ಲಿ
ನಿನ್ನ
ಮಂತ್ರಮಯ ಮಾತೃವಕ್ಷಸ್ತನ್ಯಧೈರ್ಯವನೀಂಟುತಿರಲೆನ್ನ ಬಾಯಿಃ
ದೇಹದಲಿ ವಿಶ್ರಾಂತಿ;
ನರಗಳಲಿ ವಿಶ್ರಾಂತಿ;
ಭಾವದಲಿ ವಿಶ್ರಾಂತಿ;
ಹೃದಯದಲಿ ವಿಶ್ರಾಂತಿ;
ಮನದಿ ವಿಶ್ರಾಂತಿ;-
ಚೇತನದಿ ತುಂಬಿ ಬರಲಂಬುಧಿಯ ಗಂಭೀರ ಶಾಂತಿ!
ಓಂ ಶಾಂತಿಃ ಶಾಂತಿಃ ಶಾಂತಿಃ!

೧೫-೫-೧೯೫೯

## ಓಂ ಕಲ್ ಪುಲ್ ಮಣ್ ಓಂ!

ಫಾಲ್ಗುಣ ಪ್ರಾತಃಕ್ರತುಪುರುಷಂ
ಮೂಡಿದಣಾ ಪ್ರಾಗಗ್ನಿಯ ದಿಗ್ವೇದಿಯೊಳುತ್ತ!
ಕುಂಕುಮ ಸಿಂಚಿತ, ಹೊಲ ನೆಲ ಉತ್ತ!
ಹೃದಯದ ಹಾವಿಗೆ ರವಿರಯಿಹರುಷಂ
ಧೃತಪೋಷಿತ ಗೋಜ್ವಾಲೆಯ ಹುತ್ತ

ವಾಲ್ಮೀಕಿಯ ಸುತ್ತ!
ಚೋರೆ ಗುಬ್ಬಳಿಸಿತ್ತು ಅತ್ತ;
ಕೆಂಬೂತಂ ಪಾರಿತು ಪೊದೆಯಿಂದಿತ್ತ;
ಕಲ್ ಮಣ್ ಪುಲ್ ಏರಿಳಿಯಿತು ಮಾತೆಯ ಚಿತ್ತ!
ಕವಿ ಉನ್ಮತ್ತ!
ಭಾವೋನ್ಮತ್ತ!
ಆನಂದೋನ್ಮತ್ತ!
ಓಂ ಶಾಂತಿಃ ಶಾಂತಿಃ ಶಾಂತಿಃ!

೪-೩-೧೯೫೨

## ರಸಾನುಭೂತಿ ಮೌನವದುವೆ ಕಾವ್ಯದರಮನೆ

ಪ್ರಕೃತಿ ತಾಯ ಮಡಿಲಿನಲ್ಲಿ
ಮಲೆಯನಾಡಿನಡವಿಯಲ್ಲಿ
ಕವಿಯೊರ್ವನೆ ನಡಸೆಯುವಲ್ಲಿ-
ನುಡಿಯೆ ಸೆರೆಮನೆ.
ಮಲೆಯ ಬೀಡಿನೆದೆಯ ಮೇಲೆ
ದಟ್ಟಗಾಡು ಹಬ್ಬಿರೆ,
ಹಸುಳೆ ಬಿಸಿಲ ಹೊನ್ನ ಲೀಲೆ
ಹಸುರ ಕಡಲ ತಬ್ಬಿರೆ,
ಪಕ್ಷಿಗಾನ ಕೋಟಿವೀಚಿ
ನಾದ ಶರಧಿಯಾಗಿರೆ,
ಇಂದ್ರಿಯಂಗಳಿಂದ್ರಜಗಕೆ
ದಿವಾದ್ವಾರವಾಗಿರೆ,-
ರಸಾನುಭೂತಿ ಮೌನವದುವೆ
ಕಾವ್ಯದರಮನೆ!

೧೮-೪-೧೯೩೭

## ಹಕ್ಕಿಗಳ ಸಂಗದಲಿ

ಹಕ್ಕಿಗಳ ಸಂಗದಲಿ
ರೆಕ್ಕೆ ಮೂಡುವುದೆನಗೆ;
ಹಾರುವುದು ಹೃತ್ಪಕ್ಷಿ
ಲೋಕಗಳ ಕೊನೆಗೆ!

ಹಾರಿ ಲೋಕದ ಕೊನೆಗೆ,
(ರಸದ ಪೈರಿನ ಮನೆಗೆ,)
ಬಾಣದಂತೆರಗುವುದು
ಹಾಲು ಜೇನ್ದೆನೆಗೆ!

ಅಲ್ಲಿ ಮೂಡುವನು ರವಿ:
ಆದರೀ ರವಿಯಲ್ಲ!
ಅಲ್ಲಿ ಹಾಡುವನು ಕವಿ:
ಈ ಕವಿಯು ಅಲ್ಲ!

ಕೇಳಿದರೆ, ಹೃತ್ಪಕ್ಷಿ
ಮೌನವನೆ ಹಾಡುವುದು!
ಮೂಕ ಸುಂದರ ಅಕ್ಷಿ
ಎದೆಯ ಕಾಡುವುದು!

೧೮-೯-೧೯೩೭

## ಶಶಿಯ ದೋಣಿ

ನೀಲಧಿಯಲಿ ಶಶಿಯ ದೋಣಿ
ಈಸುತಿತ್ತು;
ಮಂದಾನಿಲಂ ಮಂದಮಂದಂ

ಬೀಸುತಿತ್ತು.
ತೇನೆ ಹಕ್ಕಿಯೊಂದು ವಾಣಿ
ಕೇಳುತಿತ್ತು;
ಮುಗಿಲಿನಿಂದ ಜೊನ್ನ ಜೇನು
ಬೀಳುತಿತ್ತು!.

ಕುಳಿತು ಶಶಿಯ ದೋಣಿಯಲ್ಲಿ
ಮುಗಿಲ್ದೆರೆಯ ಬಾನಿನಲ್ಲಿ
ಈಸಿ ಈಸಿ,
ಬೆರೆತು ತಂಪುಗಾಳಿಯಲ್ಲಿ
ಮಲೆಯ ಬನ ಬನಂಗಳಲ್ಲಿ
ಬೀಸಿ ಬೀಸಿ,
ತೇನೆಹಕ್ಕಿ ರೆಕ್ಕೆಯೇರಿ
ಗಾನದಿಂಪಿನಲೆಯ ಸೇರಿ
ಹಾರಿ ಹಾರಿ;
ಸುರಿಯೆ ಪೆರೆಯ ಹಿಳಿದ ಜೇನು
ಜೊನ್ನೆಳೊಂದುಗೂಡಿ ತಾನು
ಸೋರಿ ಸೋರಿ,ಕವಿಯ ಜೀವರಸದ ಲಹರಿ
ಜಗತ್ ಪ್ರಾಣನಾಡಿಯಲ್ಲಿ
ಸ್ಪಂದಿಸಿತ್ತು;
ಧ್ಯಾನ ಜ್ಯೋತ್ಸ್ನೆ ಇಹವ ಪರವ
ಬಂಧಿಸಿತ್ತು;
ಶಿವಸಿಂಧುವನಾತ್ಮ ಬಿಂದು
ಸಂಧಿಸಿತ್ತು;
ಅಶ್ರುಪೂರ್ಣ ಕವಿಯ ಹೃದಯ
ಕಲಾರತಿಗೆ ಆರತಿಯೆತ್ತಿ
ವಂದಿಸಿತ್ತು!

೨೧-೨-೧೯೩೫

# ನಾ ಜಂಗಮ ದೇವಸ್ಥಾನ !

ನಾ ಜಂಗಮ ದೇವಸ್ಥಾನ!

ಶತವರ್ಣದೊಳಿರೆ ಉದ್ಯಾನ
ಆತ್ಮದೊಳಿರೆ ಅನುಸಂಧಾನ
ಚಿತ್ತದೊಳಿರೆ ಶ್ರೀಮದ್‌ಧ್ಯಾನ
ನಾ ಜಂಗಮ ದೇವಸ್ಥಾನ!

ನಾಟ್ಯಮಾನ ಭಾವೋಜ್ವಲ ರಕ್ತದಿ
ಬಿಂದು ಬಿಂದುವೊಳೂ ನಂದನ ನರ್ತಿಸೆ
ನರ್ತಿಸುವುವು ಮಂತ್ರಾಪ್ಸರ ವೃಂದಾ!
ಭಗವಚ್ಚಿಂತಾ ಜಟಾಪ್ರಪಾತದಿ
ಧುಮುಕುವ ಸಾವಿರ ಜಿಹ್ವಾಸ್ರೋತದಿ
ಧಮನಿಧಮನಿಯಲಿ ಹರಿವುವು ಗಂಗಾ೧

ಕೋಟಿಕಣ್ಗಳಲಿ ನೋಟವೆ ಆಗಿ
ಕೋಟಿ ಕಿವಿಗಳಲಿ ಝೇಂಕೃತಿಯಾಗಿ
ಕೋಟಿ ರಸನೆಯಲಿ ಹೊಸಜೇನಾಗಿ
ಕೋಟಿ ದೇವರಿಗೆ ದೇಗುಲವಾಗಿ;
ಎಲ್ಲ ದೇವರೂ ನನ್ನೊಳಗಾಗಿ
ನನ್ನ ಎಲ್ಲವೂ ಅನ್ಯವೆ ಆಗಿ
ರಸಯೋಗದೊಳಿರೆ ಎಲ್ಲಮೆ ಆಗಿ,
ನಾ ಜಂಗಮ ದೇವಸ್ಥಾನ!

೨೮-೯-೧೯೫೦

# ಒಂದು ಗುಲಾಬಿ ಹೂವಿಗೆ

೧

ಮತ್ತೆ ಮತ್ತೆ ಬಳಿಗೆ ಬರುವೆ,
ಮತ್ತೆ ಮತ್ತೆ ನೋಡುತಿರುವೆ;
ನೋಡಿದಷ್ಟೂ ನೋಡಬೇಕು
ಎಂಬ ಆಶೆಗಿಲ್ಲ ಸಾಕು!
ಉದ್ಯಾನವೆ ಹಸುರ ಚೆಲ್ಲಿ
ಬಿಸಿಲ ಹೀರುತಿರುವ ಈ
ಭಾದ್ರಪದದ ಬೆಳಗಿನಲ್ಲಿ
ಈ ಗುಲಾಬಿಯೊಂದು ಹೂವು
ಮದನ ಹೃದಯರತಿಯ ಸಾವು!

೨

ಚುಂಬನ ಕಾತರೆ ನಾಕದ ಅಪ್ಸರಿ
ಋಷಿ ಶಾಪದಿ ಈ ಗಿಡವಾಗೆ
ಅವಳಾ ಹವಳದ ತುಟಿ ಈ ಹೂವಾಗಿ
ಮುಂಬರಿಸುತ್ತಿದೆ ತನ್ನಾ ಕೃತಿಯಂ:
ಚುಂಬನಕಾಹ್ವಾನಿಸಿ ಮೂದಲಿಸುತ್ತಿದೆ ಆ ಯತಿಯಂ!

೩

ನಾನೆಯೆ ಆಗಿದ್ದೆನೆ ಅವನು?
ಆ ಯತಿ?
ಬಲ್ಲನು ಆ ಶಿವನು!
ಪಶುಪತಿ!

೨೦-೯-೧೯೪೯

# ಇಬ್ಬನಿಯವತಾರ!

೧

ಪ್ರೀತಿಸು, ಮುದ್ದಿಸು, ಒಲಿ, ಆಲಿಂಗಿಸು;
ಬರಿ ನೀರಿನ ಹನಿ ಎನಬೇಡ:
ಪಚ್ಚೆಯ ಪುಲಕವೆ ಎಚ್ಚತ್ತೋಲಿಯಹ
ಆಶ್ವೀಜಾಂತ್ಯದ ಹಚ್ಚನೆ ಹಸುರಲಿ
ಬೆಚ್ಚನೆ ಮಲಗಿಹ ಚೊಚ್ಚಲ್ ಬಿಸಿಲಲಿ
ಮಿಣುಕಿದೆ ಕಿಡಿಯಿಬ್ಬನಿ ನೋಡ!
ಕಾರಿರುಳಿನ ಮಿಂಚುಂಬುಳುವಂತೆ,
ಕರ್ದಿಂಗಳ ಬಾನಿನ ಅರಿಲಂತೆ,
ಮುತ್ತಯ್ದೆಯ ಮೂಗುತಿ ಹರಳಂತೆ,
ಧ್ಯಾನಿಯ ಕಣ್ಣೆವೆಗೊದಲಿನಂಚೊಳ್
ಹೊಂಚುವ ಬಾಷ್ಪದ ಬಿಂದುವಿನಂತೆ
ಆಶ ಭಾವೋಜ್ವಲ ನೋಡ!
ನಶ್ವರ ಲೀಲಾಸುಖಿ ಈ ಈಶ್ವರನನು ನೋಡ:
ನೋಡಿಯೆ ನಶ್ವರವನು ನೀನ್ ಅವಿನಶ್ವರ ಮಾಡ!

೨

ಸ್ಟಾಲಿನ್ ಟ್ರೂಮನ್ ಭೇಟಿಗೆ ನೂರ್ಮಡಿ
ಮುಖ್ಯಂ ಭವ್ಯಂ ಕವಿಗೀ ನೀರ್ ಕಿಡಿ!
ಹಿಡಿದಿಲ್ಲೀ ಹನಿಗವರಾ ಕೀರ್ತಿಯ ಶನಿ:
ಗುಡಿ ಕಾಣಾ ಶಾಂಥಿಯ ದೇವತೆಗೀ ಇಬ್ಬನಿ!
ಇದು ಗಾಂಧೀಜಿಯ ಸಂದೇಶದ ನುಡಿ:
ಅರಿತೂ ಕಲಿತೂ ಶಾಂತಿಗೆ ದುಡಿ, ಮಡಿ!
ಇಬ್ಬನಿಯಲಿ ಸುಖಿಸುವ ಹೃದಯವೆ ದೇವಗೆ ಗುಡಿ;
ಸಾಮಾನ್ಯದಿ ಸುಖಿಪುದೆ ಚಿರ ಶಾಂತಿಗೆ ಮುನ್ನುಡಿ.
ವೈರ ಚಿಕಿತ್ಸೆಗೆ ಇದೆ ಶಸ್ತ್ರ;
ಅಣುಬಾಂಬಿಗು ತಾ ಪ್ರತ್ಯಸ್ತ್ರ!

೩

ಬರಿ ಹನಿಯಲ್ಲಿದು: ಸ್ವರ್ಗಾದೇಶಂ!
ಬರಿ ಹೊಳಪಲ್ಲಿದು: ದಿವ್ಯಾವೇಶಂ!
ಅವತಾರಗಳಲಿ ಇದೂ ಒಂದೀ ಹಿಮಮಣಿ:
ನಶ್ವರಲೀಲೆಯ ಈ ಶಾಶ್ವತನಿಗೆ ಮಣಿ!
ಕ್ಷಣಿಕಂ? ಅದಕಾಗಿಯೆ ತಡಮಾಡದೆ
ವಂದಿಸು, ಕೀರ್ತಿಸು. ಆಲಿಂಗಿಸು, ಒಲಿ.
ಬರಿ ನೀರಿನ ಹನಿ ಎನಬೇಡ!
ರಸಾನುಭವದೊಳೆಯೆ ಜಗತ್ ಶಾಂತಿಗೆ
ಬೆಂಬಲವಾಗುವ ತಪೋರೂಪದೀ
ಸಕ್ರಿಯ ಕಾಣಿಕೆಯನು ನೀಢ!

೨೮-೧೦-೧೯೪೯

## ಭಗವಂತನೆ ಕವಿ, ಸಹೃದಯನಾಂ!

ರಸಪ್ರಯೋಜನ ಭುವನಂ ಕವನಂ:
ಭಗವಂತನೆ ಕವಿ, ಸಹೃದಯನಾಂ!

ಬಾನೋ ಬಯಲೋ ಕಾಡೋ ಮಿಗವೋ
ಮಣ್ಣಿನೊಳಾಡುವ ಮುದ್ದಿನ ಮಗುವೋ,
ಹಕ್ಕಿಯ ಗೂಡಿನ ಮುತ್ತಿನ ಮೊಟ್ಟೆಯೊ
ಮಿಂಚುವ ಚುಕ್ಕಿಯ ರೆಕ್ಕೆಯ ಚಿಟ್ಟೆಯೊ,
ಅಲೆ ಅಲೆ ಏರಿಳಿಯುವ ಮಲೆಬೆಟ್ಟವೊ
ಹೂವಕ್ಕಿಯ  ಇಂಚರ ಟೂವ್ವಿಟ್ಟುವೊ,-
ರಸಪ್ರಯೋಜನ ಭುವನಂ ಕವನಂ:
ಭಗವಂತನೆ ಕವಿ, ಸಹೃದಯನಾಂ!

ಹೊನಲೋ ಹೊಳೆಯೋ ತಳಿರೋ ತರುವೋ
ಕೆಚ್ಚಲ ಕರುವನು ನೆಕ್ಕುವ ತುರುವೋ,
ಮುಳುಗುವ ನೇಸರೊ ಮೂಡುವ ತಿಂಗಳೊ
ಚೆಲುವಿನ ಹೆಂಗಳೊ ಒಲವಿನ ಕಂಗಳೊ,
ಆನೆಯೊ ಸಿಂಹವೊ ಮೊಸಳೆಯೊ ಮೀನೋ
ಉಗ್ರವೊ ಸಾಧುವೊ ಎಂತೋ ಏನೋ-
ರಸಪ್ರಯೋಜನ ಭುವನಂ ಕವನಂ:
ಭಗವಂತನೆ ಕವಿ, ಸಹೃದಯನಾಂ!

ಅಲ್ಪವೊ ಭೂಮವೊ ಹಿರಿದೋ ಕಿರಿದೋ
ಸಿಹಿಯೋ ಕಹಿಯೋ ಬಿಳಿದೋ ಕರಿದೋ,
ಬಂಜರು ಮಳಲೋ ಹುಲುಸಿನ ಹೊಳಲೋ
ಬರವೋ ಸಾವೋ  ಕದನದ ನೋವೋ,
ನೆಲಗೆಟ್ಟಲೆವಾ ಜನತೆಯ ಬೇವೋ,
ಲೀಲಾಪ್ರಜ್ಞೆಗೆ ಸರ್ವಂ, ಓವೋ!-
ರಸಪ್ರಯೋಜನ ಭುವನಂ ಕವನಂ:
ಭಗವಂತನೆ ಕವಿ, ಸಹೃದಯನಾಂ!

೩೦-೩-೧೯೫೦

# ಉದ್ಯಾನದಲ್ಲಿ ಧ್ಯಾನಯೋಗಿ

ಬಾ, ನಮಸ್ಕರಿಸು,
ಸೌಂದರ್ಯರೂಪಿ ಭಗವಂತನಿಲ್ಲಿ ಪುಷ್ಪವೇಷಿ:
ಬಣ್ಣ ಬಣ್ಣವಾಶೀರ್ವದಿಸೆ,
ಬರಿಯ ಉದ್ಯಾನವಲ್ತೊ ಇದು ಪುಷ್ಪಕಾಶಿ!
ನೋಡು ಏನೆಂಬೆ ಈ ಕಾಶಿತುಂಬೆ?
ಭಾವದಿಂದೆ ನೀನೊಲಿದು ನಂಬೆ
ಕೆಂಪು ಕೆಂಪಲ್ಲೊ:

ದೇವರನುರಾಗವಿಳಿದು ಬರುವ ರಸರಾಮಸೇತು!
ಕಾಣು ಈ ಪೊದೆಯ ಬಿಳಿಯ ಹೂವೆದೆಯ:
ಅಬ್ಧಿ ಬೆಳ್ನಂಗೆಡೆಯುವಂತೆ ಸೊದೆಯ
ಸ್ವರ್ಗ ಸತ್ವ ತಾ
ಮರ್ತ್ಯಭಕ್ತಿಗೋತವತರಿಸುತಿರ್ಪ ರಥಾಗ್ರಕೇತು!
ಸಟೆಯೊ ಈ ನೀಲಕುಸುಮ ಕಲ್ಲೋಲ;
ದಿಟದಿ ದೇವಕಿಯ ದಿವ್ಯ ಗರ್ಭ:
ಧ್ಯಾನಿಗುದ್ಯಾನ
ಶ್ರೀಕೃಷ್ಣ ಸಂಭವಕ್ಕೊಡ್ಡಿರುವ ಯೋಗಸಂದರ್ಭ!

೧೩-೬-೧೯೫೧

## ಅಧಿದೇವತಾ ಆವಿರ್ಭೂತಿ

ಸುರಹೊನ್ನೆಯ ಮರ ದಿಟಕೂ ಸುರವಾಗಿತ್ತು;
ಹೊನ್ನಾಗಿತ್ತು.
ಶ್ರಾವಣಮಾಸದ ಸಿರಿಹೊತ್ತಾರೆಯ ವಾಯು ಮಂಡಲಕೆ
ಕಂಪಿನ ಹೊಳೆ ಹರಿದಿತ್ತು;
ಮರವೇ ಪರಿಮಳ ಪರಿವೇಷವನಾಂತಿಹ ಹೂವಿನ ಕೊಡೆಯಾಗಿತ್ತು.
ಸಾವಿರ ವರುಷದ ಪಂಪನ ಬಣ್ಣನೆ ಇಂದೂ ಸಾರ್ಥಕವಾಗಿತ್ತು!

ಚಿನ್ನದ ನೇಸರು ಕೋಲ್ಗದಿರಿಂ ಚೆಂಬಿಸಿಲಿನ ರಂಗೋಲಿಯನೆಸೆದಿತ್ತು;
ಗರುಕೆಯ ಹಸುರುಕ್ಕುವ ನೆಲ ಪಚ್ಚೆಯ ವೇದಿಕೆಯಾಗಿತ್ತು.

ಜೇನ್ದುಂಬಿಯ ಮೊರೆ, ಹಕ್ಕಿಯ ಇಂಚರ, ಕೈದೋಂಟದ ಹೂಗಳ ಪರಿವಾರ
ಕವಿಹೃದಯಕೆ ತಾನಾದುದು ರಸಲೋಕದ ಅಮೃತಾಹಾರ:
ತೆಕ್ಕನೆ ಮೋಕ್ಷಕೆ ತವರಾದುದೊ ತಾನ್ ಈ ಸಂಸಾರ!

ಸಾಮಾನ್ಯದ ಸೀಮೆಯಲಿದ್ದಾ ಸುರಹೊನ್ನೆಯ ಮರದಡಿಗೆ
ಸೌಂದರ್ಯಾವೇಶದಿ ನಡೆದೈತರೆ ಕವಿ,
ಅದ್ಭುತವಾಯಿತ್ತು:

ಸಂಯೋಗದಿ ಅವಿರ್ಭವಿಸಿತು, ಅವತರಿಸಿತು ರಸದೈವಂ ಮುಡಿಗೆ:
ಬಿಚ್ಚಿದ ಸುರುಳಿಯ ಸರ್ಪದ ಹೆಡೆ ತಾಗಿತು ಅಧಿದೇವತೆಯಡಿಗೆ!

ಸ್ಪಂದಿಸಿತಾಕಾಶ!
ಪುಲಕಿಸಿತವನಿ!
ತರುತನು ರೋಮಾಂಚಿಸಿತು!
ಮೃತ್‌ತನು ತಾಂ ಚಿತ್‌ತನುವಾಯ್ತಿ ಪೃಥಿವಿ!

ಅತಿಶೈತ್ಯಕೆ ಕಡಲಿನ ನೀರ್
ಘನವಾಗುವ ಐಕಿಲ್ಬಂಡೆಯ ತೆರದಿ,
ಭಕ್ತಿಯ ಭರಕೆ
ಆಕಾರಕೆ ಅವತರಿಸುವ ಭಗವಂತನ ತೆರದಿ,ಲ
ಕರುವೈತರೆ ಅಕ್ಕರೆಗುಕ್ಕಿ
ಹಾಲ್ ಸೊರಸುವ ಸುರಭಿಯ ತೆರದಿ,
ಸಂಭವಿಸಿತು ರಸಸತ್ವಂ ಆ ಮರದಿ!

ಶರಧಿ ಶರೀರೆ; ಗಿರಿವನ ವದನೆ;
ಗಗನಾಂಬರೆ; ಅಧಿಮಾನಸ ಸದನೆ;
ನಯನ ಸರೋವರೆ;
ಭ್ರೂ ಸುಂದರ ಅದ್ರಿ!

ಹಣೆ ಆಕಾಶವ ಕೀಸಿತು. ಪುಲಕಾವೇಶಂ
ವ್ಯೋಮವನಾಚ್ಛಾದಿಸಿತಾತ್ಮದ ಧೂರ್ಜಟಿಕೇಶಂ.
ಕೆದರಿದ ಕೂದಲ ಮೇಘಾಂತರದಲಿ. ಸೆರೆಸಿಕ್ಕಿದ ರವಿ ಚಂದ್ರ
ತಾವಾದರು ರುದ್ರಾಭರಣಂಗಳವೊಲು ಸುಂದರ ರುಂದ್ರ!

ರಸದದ್ರಿಗೆ ದುಮುಕಿದ ನಾನಿಲ್ಲಾಗಿ
ತುಂಬಿದೆನೆಲ್ಲವನಂಬರವಪುವಾಗಿ!

ಹಾಲಾದಳು ತಾಯಾಗಿ;
ಮಧುವಾದಳು ವಧುವಾಗಿ;
ಬೆಳಕಾದಳು ಗುರುವಾಗಿ:

“ಮಧು ವಾತಾ ಋತಾಯತೇ।
ಮಧು ಕ್ಷರಂತಿ ಸಿಂಧವಃ।
ಮಾಧ್ವೀರ್ನ ಸನ್ತ್ವೋಷಧೀಃ॥”

“ಮಧು ನಕ್ತಮುತೋಷಸೋ!
ಮಧುಮತ್ಪಾರ್ಥಿವಂ ರಜಃ।
ಮಧು ದ್ಯೌರಸ್ತು ನಃ ಪಿತಾ॥”

‘ಮಧುಮಾನ್ನೋ ವನಸ್ಪತಿಃ।
ಮಧುಮಾನಸ್ತು ಸೂರ್ಯಃ।
ಮಾಧ್ವೀರ್ಗಾವೋ ಭವನ್ತು ನಃ॥”

೧೮-೯-೧೯೫೫

# ಮ್ಯಾಗ್ನೋಲಿಯಾ ಗ್ರಾಂಡಿಫ್ಲೋರಾ ಅಥವಾ ವಿಭೂತಿ ಆಗಮನ

೧

ಓ ನೋಡು ಬಾರಾ:
ಗಿಡದ ಕೈಮುಗಿಹ ಮೊಗ್ಗಾಗಿ ಮೈದೋರುತಿದೆ
ಮ್ಯಾಗ್ನೋಲಿಯಾ ಗ್ರಾಂಡಿಫ್ಲೋರಾ!
ತೇರ ಚಲನೆಯ ಸಾರ್ವಭೌಮಿಕ ಉದಾಸೀನ
ನಿರ್ವೇಗದಲಿ, ಎನಿತೊ ದಿನಗಳಿಂದುದ್ಯಾನ
ಯಜ್ಞವೇದಿಯೊಳುದಿಸಿ, ಕವಿ ಮನೋಧ್ಯಾನ
ದೇವತಾ ವಸ್ತುವಾಗಿಹುದೀ ಮಹಾ ಕುಟ್ಮಲಾಕಾರ:
ಹೇವಿಳಂಬಿಯೊಳುದಿಸಿ, ಅರಳಿದೆ ವಿಳಂಬಿಯಲಿ!

೨

ಓ ನೋಡು ಬಾರಾ,
ಓಡಿ ಬಾರಾ:
ಗಿಡದ ಕೈಮುಗಿಹ ಮೊಗ್ಗಾಗಿ ಮೈದೋರುತಿದೆ
ಮ್ಯಾಗ್ನೋಲಿಯಾ ಗ್ರಾಂಡಿಫ್ಲೋರಾ,
ಋತು ವಸಂತನ ಸಖನ ಚೈತ್ರನಾಗಮನಕ್ಕೆ
ಸ್ವಾಗತವ ಬಯಸುವಂಥೆ!
ಇಂದೆಮ್ಮ ಕೋಕಿಲೋದಯ ಚೈತ್ರಮಂ ಮನೆಗೆ
ಹಬ್ಬಕ್ಕೆ ಬರುವನಿಂತೆ!

ಇನಿತು ಕಿರುಗಿಡದೊಳೆನಿತು ಹಿರಿ ಹೂವು ಅಃ
ಬೆಳ್ಳಿಬಿಳಿ ಕಲಶಶಿಶು ಬಾಯ್‌ದುಟಿಯ ತೆರೆವಂತೆ
ಅಲರುತಿದೆ ಮೂರುಲೋಕದ ಮೋಹ ಕರೆವಂತೆ
ದುಗ್ಧಧವಳಿಮ ಮುಗ್ಧತೆಯ ಮೈ ಹೊರೆಯುವಂತೆ
ದಿವ್ಯ ಧಾಮದ ಗರ್ಭಗೃಹವೆ ಕಣ್ ತೆರೆಯುವಂತೆ

ಪಂಡರೀಕಂಗಂದು
ಆ ಮಹಾಶ್ವೇತೆ ಮೈದೋರಿದಂತೆ!

೩

ಭೀಮ ತಂದ ಸೌಗಂಧಿಕಾ ಕುಸುಮ
ಇದಕೆ ಅಸಮ!
ಸತ್ಯಭಾಮೆಗಾ ಶ್ರೀ ಕೃಷ್ಣನಿತ್ತ
ಹೂ ಅದೆತ್ತ?

೪

ಅಃ ಇಂತೆ ನಾನರಳಿದರೆ ಧನ್ಯನಲ್ತೆ?
ಬೆಳಕು ಮೂಡೆ ಮಲರಿ,
ಮುಳುಗೆ ಮುಗುಳಿ,

ಬೆಣ್ಣೆಬಿಳಿ ಬಾಳ ಹೂವೆಸಳುಗಳನರಳಿ
ರಾಜರಾಜೇಶ್ವರರ ಸಿರಿಯನಿಳಿಕೆಗೈದು
ಕವಿಯ ಋಷಿಯ ಆಶೀರ್ವಾದಗಳ ಸೂರೆಗೈದು
ಅಃ ಇಂತೆನ್ನ ಬಾಳರಳಿದರೆ ಧನ್ಯನಲ್ತೆ!

೫

ಹೇವಳಿಂಬಿಯಲಿ ಆ ಕೊಡಗುದಾರಿಯಲಿ
ನಡೆದು ಬಂದರು ಅಂದು ಉದಯರವಿಗಾ
ನರವಿಭೂತಿ ಶ್ರೀ ವಿನೋಬಾಜಿಃ
ವಿಳಂಬಿಯಲಿ ಗಿಡದ ಈ ಮೈಹಸುರು ದಾರಿಯಲಿ
ನಡೆದೆ ಬಂದಿಹಳಿಂದು ತಾಯಿ ಮ್ಯಾಗ್ನೋಲಿಯಾ
ಸುಮವಿಭೂತಿ ಶ್ರೀ ದಿವ್ಯರಾಜ್ಞಿ!

ಧನ್ಯ ಹೇವಿಳಂಬಿ!….

ಧನ್ಯ ಹೇ ವಿಳಂಬಿ!*

೨೧-೩-೧೯೫೮

---

* ವಿಳಬಿ ಸಂವತ್ಸರ, ಉಗಾದಿ

## ಜರ್ಬರಾ

೧

ತೊಂಡೆ ಹಣ್ಣು ಮಣಿಯೆ ನಾಚೆ
ನಗೆಯ ಚೆಲುವ ತುಟಿಯ ಚಾಚೆ

ಜಗದ ಒಲವನೆಲ್ಲ ಬಾಚಿ
ಜ್ವಲಿಸುವಳೀ ಜರ್ಬರಾ!

ಪಂಚಬಾಣ ರಕ್ತಕಿರಣೆ
ಮನ್ಮಥ ಸತಿ ಅಲಕ್ತಚರಣೆ
ಜೀರ್ಕೋವಿಯ ಓಕುಳಿಯೇಣೆ
ಚಿಮ್ಮುವಳೀ ನಿರ್ಜರಾ!

೨

ನಿಲ್ಲು, ನೋಡು, ಕಾಣ್!
ಗಮನಿಸು, ಬಾಗು!
ಪರಿಭಾವಿಸು! ಆಸ್ವಾದಿಸು! ಧ್ಯಾನಿಸು! ಒಂದಾಗು!

ಈ ಒಂದೆ ಹೂ ಜರ್ಬರಾ,
ಮರದ ಬುಡದ ರಾಕರಿಯಲ್ಲಿ
ಮೂಡಿ ಕಠಿನ ಮರ್ತ್ಯದಲ್ಲಿ
ನಾಚುತಿರುವ ನಿರ್ಜರಾಬ
ಬಿಂಬಾಧರದಪ್ಸರಾ!

ನೀನಾಸ್ವಾದಿಸದಿದ್ದರೆ
ಅದು ಇದ್ದೂ ನೀನಿದ್ದೂ
ಅದೂ ಇಲ್ಲ, ನೀನೂ ಇಲ್ಲ;
ಶೂನ್ಯ ಇಬ್ಬರೂ!

ನೀನಾಸ್ವಾದಿಸಿದರೆ
ಅಸ್ತಿ, ಭಾತಿ, ಪ್ರಿಯಃ
ಅದೂ ನೀನೂ ಶಾಶ್ವತ!
ಅದೇ ನೀನು, ನೀನೆ ಅದು;
ಎರಡೊಂದಾಗುತ ಶಾಶ್ವತ!
ಒಂದು ಶೂನ್ಯ ಅಧರವಾಗೆ
ಒಂದು ಶೂನ್ಯ ಓಷ್ಠವಗೆ

ಪೂರ್ಣವೊಂದೆ ಚುಂಬಿತ!
ರಸಾನಂದ ಯೋಗಲಯದಿ
ಶೂನ್ಯವನ್ನು ಶೂನ್ಯವಪ್ಪಿ
ಪೂರ್ಣವಿಬ್ಬರೂ! ಋತ!

ನಿಲ್ಲು, ನೋಡು, ಕಾಣ್!
ಗಮನಿಸು, ಬಾಗು!
ಪರಿಭಾವಿಸು, ಆಸ್ವಾದಿಸು, ಧ್ಯಾನಿಸು, ಒಂದಾಗು!

೧೦-೯-೧೯೫೮

## ಪ್ರೇತವೃಕ್ಷ

ಮ್ಲಾನ, ಶೂನ್ಯ, ದೀರ್ಘ, ನಗ್ನ,
ರಿಕ್ತ, ಋಜು ದಿಗಂತದಿ
ಗಗನಕೆದುರು ನಿಂತಿದೆ ತರು
ಮಸಿಯ ಚಿತ್ತಿನಂದದಿ:
ಹೃದಯವಶದೆ ನೀತಿಗೆಟ್ಟು
ನಿಷ್ಕರುಣ ಸಮಾಜ ಬಿಟ್ಟು
ಕಳೆದನಾಥೆಯಂದದಿ!

ವಕ್ರರೂಪಿ ರೂಕ್ಷದೇಹಿ
ಸಂಗಹೀನ ಮರುತರೂ,
ಏತಕಿಂತು ಒಂಟಿ ನಿಂತು
ತಪಿಸುತಿರುವೆ, ತರುಗುರೂ?
ಜೀವನ ರಸವರತು ಹೋಗಿ
ಜೀವಿ ಬರೆ ಪರೇತವಾಗಿ
ಸಾನುಭೂತಿಯಾಗಿರು!

ನಿರ್ಜನತೆಯ ಸುಖಸಂಗಂ
ಕರುಬಿ ಕೊರೆವ ಮಂದಿಗಿಂ:
ನೀರವತೆಯೆ ಸಂಗೀತಂ
ಬೊಬ್ಬಿರಿಯುವ ಮಂದೆಗಿಂ;
ಎಂದು ನೀನು ದೂರ ನಿಂತೆ,
ತರುತಪಸ್ವಿ, ಮೌನವಾಂತೆ;
ನೀನಿಂದೆನಗೊಂದಿಗಂ!

ಜೀವನದ ದಿಗಂತದಿಲ್ಲಿ
ಸ್ಥಾನ ನಿನ್ನದೆತ್ತರ;
ಮಿರ್ತುಮನೆಯ ಹೊಸ್ತಿಲಲ್ಲಿ

ನಿನ್ನ ದೃಷ್ಟಿ ಬಿತ್ತರ:
ನೆತ್ತಿಯ ಗುರಿ ಅಂತರಿಕ್ಷ;
ಬೇರಿನ ನೆಲೆ ಭೂಮಿವಕ್ಷ;
ಲೋಕವೆರಡು ಹತ್ತಿರ!

ಹಣ್ಣು ಹೂವು ಎಲೆಗಳೊಲವೆ?
ಕಾಣೆ ನೀನು, ಚಾಗಿಯೆ!
ದೃಢನಿಶ್ಚಲದೊಂದು ಛಲವೆ
ವ್ರತ ನಿನಗೆ, ವಿರಾಗಿಯೆ!
ಹಕ್ಕಿಯೊಂದು  ನಿನ್ನ ಬಳಿಗೆ
ಹಾರಿಬಂದು ಒಂದು ಗಳಿಗೆ
ಉಳಿವುದಿಲ್ಲ, ಯೋಗಿಯೆ!

ರಂಗನೆರಚೆ ಕೆಂಪು ಸಂಜೆ
ಮುಗಿಲ ರಕ್ತ ರಂಗದಿ
ನಿನ್ನ ಹೃದಯ ಬರಿಯ ಬಂಜೆ
ಭಾವವಿಲ್ಲದಂಗದಿ?
ಜ್ಞಾನ ಮಾತ್ರ ನಿನ್ನ ಬುದ್ಧಿ?

ನಿರ್ಗುಣತೆಯೆ ನಿನಗೆ ಸಿದ್ಧಿ?
ಸಂಗ ತಾನಸಂಗದಿ?

ಪ್ರೇತಹಸ್ತಗಳನು ಚಾಚಿ
ನಿನ್ನ ನಖಪ್ರಾರ್ಥನೆ,
ಓ ವಿರಕ್ತ ತರುಪಿಶಾಚಿ,ಲ
ಪರಚಿ ನಭೋಮುಖವನೆ
ಪರವನೇಕೆ ಕಾಡುತಿಹುದು?
ವರವನೇನು ಬೇಡುತಿಹುದು?
ಪ್ರೀತಿಯ ರಸಸುಖವನೆ

ವ್ಯರ್ಥವಲ್ಲ ತವತಪಸ್ಸು,
ಮರದವಸಿಯ ಮೂರುತಿ.
ಮುಂದಕಿಹುದು ಚಿರಯಶಸ್ಸುಃ
ನುತಿಯಲ್ಲದ ಕೀರುತಿ!
ನಿನಗೆ ಕಾಯುತಿರುವುದಲ್ಲಿ
ಮುಕುತಿಯ ಕೊನೆಯೊಸಗೆಯಲ್ಲಿ
ಅಮೃತ ಮಂಗಳಾರತಿ!

ಕಣಿವೆ ಬದುಕು ಸೊಗಸು, ತಂಪು?
ಅಲ್ಲಿ ಬಿಸಿಲು ಚುಚ್ಚದು.
ಹಕ್ಕಿಯಿಂಪು; ಹಸುರ ಸೊಂಪು;
ಅಲ್ಲಿ ಚಳಿಯು ಕಚ್ಚದು.
ಅದನು ಬಿಟ್ಟೆ; ದೀಕ್ಷೆ ತೊಟ್ಟೆಃ
ತಪದ ಕಠಿನಕದೆಯ ಕೊಟ್ಟೆಃ
ಅಯ್ಯೊ, ಮಂದಿ ಮೆಚ್ಚದು!

ಮಂದಿ ಮೆಚ್ಚಲದುವೆ ಹೆಚ್ಚೆ?
ಸುಳ್ಳು, ಹೊಳ್ಳು ಆ ಸ್ತುತಿ!
ಮೇಲು ಬಣ್ಣಕದರ ಕಣ್ಣು;
ಅದರದು ಅತಿ ಶಿಶುಮತಿ!

ಗಣಿಸದದನು, ತರುವೆ ನಿಲ್ಲು;
ಮೌನದಿಂದೆ ಮನವ ಗೆಲ್ಲು,
ಹೇ ಸ್ವತಂತ್ರ ವಶಮತಿ!

೨೬-೯-೧೯೩೭

## ಚಕ್ರಚರಣೆಗೆ ಸ್ವಾಗತಂ!"

ಸ್ವಾಗತಂ ಸುಸ್ವಾಗತಂ,
ಚಕ್ರಚರಣೆಗೆ ಸ್ವಾಗತಂ!
ಗೆಲ್ಗೆ ಕವಿ ಮನೋರಥಂ;
ಬಾಳ್ಗೆ ನಮ್ಮ ನವರಥಂ!

ಬಂದಳಿಂದು ಮನೆಗೆ ಶಕ್ತಿ,
ನೂತ್ನ ಯಂತ್ರ ರೂಪಿಣಿ:
ಲೋಹಕಾಯೆ, ವೇಗತಂತ್ರೆ,
ಅಗ್ನಿ ತೈಲ ವಾಹಿನಿ!

ಆವ ದೇವಿ ರವಿಯ ಸುತ್ತ
ಭೂಗೋಲವ ತಿರುಗಿಸುತ್ತ
ತನ್ನ ರುಂದ್ರ ಲೀಲೆಯತ್ತ
ಸಾಗು ತಿರುವಳೋ,

ಖನಿಜ ಸಸ್ಯ ಪ್ರಾಣಿವರ್ಗ
ಮನುಜ ದನುಜ ಸುರ ನಿಸರ್ಗ
ಯಂತ್ರ ತಂತ್ರ ಮಂತ್ರವಾಗಿ
ನಿಯಂತ್ರಿಸಿರುವಳೋ,

ಅವಳ ಇಂದು ಮನೆಗೆ ಬಂದು
ಇಂತು ನಮ್ಮ ಮುಂದೆ ನಿಂದು

ಹರಸುತಿಹಳು ಭಕ್ತಬಂಧು,
ಈ ವಾಹನ ವೇಷದಿ!

ನಮಸ್ಕರಿಸಿ ಸಮರ್ಪಿಪೆನ್,
ಚಕ್ರ ಚರಣೆ, ಜನನಿ, ಇದೆಕೊ
ತವ ಪವಿತ್ರ ಚತುಷ್ಪದಕೆ
ಪ್ರಾಕ್ ಮಂತ್ರ ಘೋಷದೀ
ವಾಕ್ ಪವಿತ್ರ ಪುಷ್ಪಮಂ!

"ಓಂ
ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ
ನಮಸ್ತಸ್ಸೈ ನಮಸ್ತಸ್ಸೈ ನಮಸ್ತಸ್ಸೈ ನಮೋನಮಃ!
ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ
ನಮಸ್ತಸ್ಸೈ ನಮಸ್ತಸ್ಸೈ ನಮಸ್ತಸ್ಸೈ ನಮೋನಮಃ!
ಚಿತಿರೂಪೇಣ ಯಾ ಕೃತ್ಸ್ನಮೇತದ್ ವ್ಯಾಪ್ಯಸ್ಥಿತಾ ಜಗತ್
ನಮಸ್ತಸ್ಸೈ ನಮಸ್ತಸ್ಯೈ ನಮಸ್ತಸ್ಸೈ ನಮೋನಮಃ!
ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತು ತೇ!
ಸರ್ವಸ್ವರೂಪವೇ ಸರ್ವೇಶೇ ಸರ್ವಶಕ್ತಿ ಸಮನ್ವಿತೇ
ಭಯೇಭ್ಯಸ್ತ್ರಾಹಿ ನೋ ದೇವಿ ದುರ್ಗೇ ದೇವಿ ನಮೋಸ್ತು ತೇ!"
ಓಂ ಶಾಂತಿಃ ಶಾಂತಿಃ ಶಾಂತಿಃ

## ನವಿಲುಕಲ್ಲಿನಲ್ಲಿ ಮತ್ತೊಮ್ಮೆ!

ನಾ ಧನ್ಯ ನಾ ಧನ್ಯ ನಾ ಧನ್ಯನಿಂದು
ಉಷಾರವಿಯ ದರುಶನಕೆ ಇಲ್ಲಿಗೈತಂದು!
ಮಾತೆ ಮೈದೋರಿಹಳು: ಕೈಮುಗಿದು ನಿಂದು
ಕಣ್ತುಂಬಿ ನೋಡು; ಮಾತಾಡದಿರು, ಬಂಧು,

ಆತ್ಮದಾನಂದದಲಿ ಮುಳುಗಿಮುಳುಗಿ ಮಿಂದು
ನಾ ಧನ್ಯ ನಾ ಧನ್ಯ ನಾ ಧನ್ಯನಿಂದು!

ತಾಯಿ ಹರಸಿದಳೆನ್ನ; ನಲ್ಲೆ ವರಿಸಿದಳೆನ್ನ;
ಗುರುವು ಆಶೀರ್ವದಿಸಿ ಕೃಪೆಯೊಳೆನ್ನ
ಪುರಸದನದಲಿ ಬೆಂದು ಕುದಿವೆದಯನೆಳೆತಂದು
ಕ್ಷೀರಾಬ್ಧಿಗದ್ದಿದನೊ ಅಮೃತಸಿಂಧು!
ನಾ ಧನ್ಯ ನಾ ಧನ್ಯ ನಾ ಧನ್ಯನಿಂದು!-
ಉಷಾರವಿಯ ದರುಶನಕೆ ಇಲ್ಲಿಗೈತಂದು!

ಹಿಂಜಿದರಳೆಯ ಹಿಂಡೊ? ಐರಾವತದ ದಂಡೊ?
ಮಂಜೊ? ಇಂಗಡಲೊ? ಸಾಕ್ಷಾತ್ಕಾರವೋ?
ಮಲೆಯ ತಲೆಯಾ ಬಂಡೆಯಲ್ಲೇನ ನಾ ಕಂಡೆ?
ಷಟ್ಚಕ್ರದಗ್ರದ ಸಹಸ್ರಾರವೋ?
ನಾ ಧನ್ಯ ನಾ ಧನ್ಯ ನಾ ಧನ್ಯನಿಂದು
ಉಷಾರವಿಯ ದರುಶನಕೆ ಇಲ್ಲಿಗೈತಂಧು!

ಮಣ್ಣೆಲ್ಲ, ಕಣ್ಣಾಗಿ, ಮೃತ್ತೆಲ್ಲ ಚಿತ್ತಾಗಿ,
ಜಗವೆಲ್ಲ ತಾಯ್ ತಳೆದ ತನುವಾದುದೋ?
ಕವಿಯೆನ್ನ ಸವಿಗಾಗಿ ದಿವಿಜವೃಂದವೆ ನೆರೆದು
ಆನಂದರಸವಿಲ್ಲಿ ಮಡುವಾದುದೋ?
ನಾ ಧನ್ಯ ನಾ ಧನ್ಯ ನಾ ಧನ್ಯನಿಂದು
ಉಷಾರವಿಯ ದರುಶನಕೆ ಇಲ್ಲಿಗೈತಂದು!

ಮಂಜು ತುಂಬಿದ ಕಣಿವೆಯಾ ಮಂಜು ಚಿತ್ರದಲಿ
ಕಡಲಿನಿಂದಲ್ಲಲ್ಲಿ ದೀವಿಗಳವೋಲ್
ಕಾಡು ತುಂಬಿದ ಮಲೆಯ ಸಾಲ್ ನೆತ್ತಿ ತಲೆಯೆತ್ತಿ
ತೋರುತಿರೆ ಚಿನ್ಮಯದಿ ತೇಲ್ವಂತೆವೋಲ್,
ನಾ ಧನ್ಯ ನಾ ಧನ್ಯ ನಾ ಧನ್ಯನಿಂದು
ಉಷಾರವಿಯ ದರುಶನಕೆ ಇಲ್ಲಿಗೈತಂದು!

ನನಗಾಗಿ ಸಮೆದಿಹಳು, ಸಂದೇಹವೆನಗಿಲ್ಲ,
ಪ್ರಕೃತಿಯಾಗಿಲಹ ಪರಾಲೋಕಾನಾಥೆ.
ಅಲಭ್ಯವೀ ಸಮಯಕ್ಕಪೂರ್ವದೀ ದೃಶ್ಯ:
ಜಗಕೆ ತಾಯಾದರೂ ನನಗುಮಲ್ತೆ?
ನಾ ಧನ್ಯ ನಾ ಧನ್ಯ ನಾ ಧನ್ಯನಿಂಥು
ಉಷಾರವಿಯ ದರುಶನಕೆ ಇಲ್ಲಿಗೈತಂದು!

ಬಹುದಿನದ ಪ್ರಾರ್ಥನೆಗೆ ಬಹುದಿವ್ಯ ಫಲವಾಯ್ತು;
ಮನಕೆ ನೆಮ್ಮದಿಯಾಯ್ತು; ಧೈರ್ಯವಾಯ್ತು.
ದಿವ್ಯದರುಶನದಿಂದೆ ನವ್ಯಚೇತನವಾಯ್ತು;
ಭವ್ಯಾನುಭವಕಮೃತಕಲಶವಾಯ್ತು!
ನಾ ಧನ್ಯ ನಾ ಧನ್ಯ ನಾ ಧನ್ಯನಿಂಥು
ಉಷಾರವಿಯ ದರುಶನಕೆ ಇಲ್ಲಿಗೈತಂದು!

೩೦-೩-೧೯೪೪

## ಪಕ್ಷಿ

ಪಕ್ಷಿ?
ಅಲ್ತಲ್ತಾ ತರುಚೇತನ ಚೈತ್ಯಾಕ್ಷಿ
ಗರಿ ತಳೆದಿದೆ ಸಸ್ಯಪ್ರಜ್ಞೆಗೆ ಸೇಂದ್ರಿಯ ಸಾಕ್ಷಿ!

ನಿರ್ಜರ ಸಾಧಕನೊರ್ವನ ಶ್ರೀಜಪ ಬಾಯ್ತಪ್ಪಿ
ಪತನ ಪರಾಙ್ಮುಖಿ ತಾಂ ಖಗರೂಪವನಪ್ಪಿ
ಅವತರಿಸಿಹುದೀ ತರುಶಿವ ಜೂಟಾಗ್ರದೊಳೊಪ್ಪಿ!

ಋಷಿಮಾನವನೊರ್ವನ ಹೃದಯ ಅಭೀಪ್ಸಾಗಾಯತ್ರಿ
ಭಗವಚ್ಚರಣಚಿದಂಬರ ಯಾತ್ರಿ
ಮಾರ್ಗಾಯಾಸದಿ ತಂಗಿಹುದೀಯೆಡೆ ನಾಕ್ಷತ್ರಿಕನೇತ್ರಿ!

ಶ್ರೀಗುರುವಿನ ಅಹಮಸ್ಮಿಯ ಆಶೀರ್ವಾದ,
ಭಾಷೆಯ ಅಲ್ಲದ ಅರ್ಥವೆ ಇಲ್ಲದ ಅತಿವಾಙ್ಮಯ ವೇದ,
ಉಲಿವ ವಿಹಂಗಮವಾಗಿದೆ ಆ ಓಂಕಾರದ ನಾದ!

ಗತಕಾಲದ ಭವಭವದಾಚೆಯ ಕವಿಜನ್ಮದೊಳಾನಂದು
ಹೃದಯದಿ ಸಾಕ್ಷಾತ್ಕರಿಸಿದ ರಸಚಿಂತನಬಿಂದು,
ಆಶಿಸಿಯೂ ವಾಗ್‌ರೂಪವ ಧರಿಸದ ಕೃತಿಯೊಂದು,
ಲೋಕಾಲೋಕದೊಳೆನ್ನಂ ಪುಡುಕತಲ್ಯೆತಂದು
ಯಾಚಿಸುತಿಹುದೀ ಕವನಾಕೃತಿಯಂ ಪಕ್ಷಿಯವೋಲಿಂದು!

ಅಲ್ತಲ್ತಾ ವೈದಿಕ ಋಷಿತನು ಈ ಮರವಾಗಿ
ಅಂದಿನ ಋಷಿವಾಣಿಯೆ ಇಂದಿನ ಈ ಖಗವಾಗಿ
ಲೋಕವನೆಚ್ಚರಿಸುತ್ತಿದೆ ತಾರಸ್ವರದಲಿ ಕೂಗಿ:

"ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ
ಆಯೇ ಧಾಮಾನಿ ದಿವ್ಯಾನಿ ತಸ್ತುಃ
ವೇದಾಹಮೇತಂ ಪುರುಷಂ ಮಹಾನ್ತಂ
ಆದಿತ್ಯವರ್ಣನಂ ತಮಸಃ ಪರಸ್ತಾತ್
ತಮೇವ ವಿದಿತ್ವಾತಿಮೃತ್ಯುಮೇತಿ
ನಾನ್ಯಃ ಪನ್ಥಾ ವಿದ್ಯತೇಽಯನಾಯ!"

## ಕಣ್ಣು*

ಎಂತಹ ಕೃಪೆ ಈ ಕಣ್ಣು,

ಹೂದೋಟದ ಶ್ರೀನೋಟವ ಸವಿಯುತ್ತಿಹ ಈ ಕಣ್ಣು!
ಭಗವಂತನ ದಯೆ ಘನಿಸಿಹುದಿಲ್ಲಿ;
ಧನ್ಯತೆ ಕ್ಷಣಕ್ಷಣಕೂ ಅವತರಿಸಿದೆ ಇಲ್ಲಿ
ಹೂ ಹೂ ಹೂವಿನ ಸುಂದರ ರೂಪದಲಿ:

ಭಾವಿಸಿದನಿತೂ, ಕಯ್ ಮುಗಿಯುತ್ತಿದೆ;
ಚಿಂತಿಸಿದನಿತೂ, ಮನ ಮಲರುತ್ತಿದೆ;
ಧ್ಯಾನಿಸಿದನಿತೂ, ಚೇತನ ರೋಮಾಂಚನವಾಗುತಿದೆ!
ಕಣ್ಣಿನ ಈ ಸೌಭಾಗ್ಯಕೆ
ಜೀವದ ಭಕ್ತಿ ಕೃತಜ್ಞತೆ
ಜಗದಂಬಿಯ ಪಾದಕೆ ಹೂಫವಾರತಿಯೆತ್ತುತಿದೆ!
ಸಾಕ್ಷಾತ್ಕಾರದ ಅಗ್ನಿಯ ಅಂಚಿಗೆ ತಾಗುತ್ತಿದೆ
ಶರಣೆನುವೀ ನನ್ನಾತ್ಮದ ರತಿ,
ಶರಣಾಗತಿ,
ನಮಸ್ಕೃತಿ!

ಸೃಷ್ಟಿಯ ಸಾರ್ಥಕತೆಗೆ ಈ ಅಕ್ಷಿಯೆ ಸಾಕ್ಷಿ:
ಅಕ್ಷಿಯ ಪುರುಷಾರ್ಥಕೆ ಈ ಸೃಷ್ಟಿಯೆ ಸಾಕ್ಷಿ;
ಆಕ್ಷಿಯ ಸೃಷ್ಟಿಯ ಸಂಗಮಸೌಭಾಗ್ಯವೆ
ಕೃಪೆಯೆ ಸ್ವಯಂ ತಾನಾಗಿಹ ಈ ದೃಷ್ಟಿ!
ಎಂತಹ ಕೃಪೆ ಓ ಈ ಕಣ್ಣು!
ಎಂತಹ ಭಾಗ್ಯವೋ ಈ ಮಣ್ಣು!

ಕಣ್ಣು
ಬರಿ ಇಂದ್ರಿಯವಲ್ಲೊ:
ಸಾಕ್ಷಾತ್ಕಾರದ ಅಪರೋಕ್ಷದ ಅನುಭೂತಿಯ ಒಂದಂಗ!

೧೨-೧೦-೧೯೫೬

---

* ಮನೆಯ ಉದ್ಯಾನದಲ್ಲಿ ಆಶ್ವೀಜಮಾಸದ ಪ್ರಾತಃಸಮಯದ ಹೊಂಬಿಸಿಲಿನಲ್ಲಿ ಹಸುರು ಹೂವುಗಳ ವೈಭವವನ್ನು ಸವಿಯುತ್ತಿರುವಾಗ ಉಂಟಾದ ಅನುಭವ.

# ನಾಟ್ಯ ಸರಸ್ವತಿಗೆ*

ನರ್ತಿಸು, ತಾಯೆ,

ಅಜ ಜಾಯೆ,
ಮಮ ಮಸ್ತಕ ನೀರೇಜದಲಿ!

ಮಾನಸ ಅಧಿಮಾನಸಕೇರೆ
ಅತಿಮಾನಸ ಮೈದೋರೆ
ಆನಂದಾಮೃತ ರಸ ಸೋರೆ
ನರ್ತಿಸು, ತಾಯೆ,
ಅಜ ಜಾಯೆ,
ಮಮ ಮಸ್ತಕ ನೀರೇಜದಲಿ!

ಅಡಿ ಸೋಂಕಿಗೆ ಮುಡಿ ಅರಳೆ
ಅಜ್ಞಾನದ ಗಡಿ ಉರುಳೆ
ವಿಜ್ಞಾನದ ಕಾಂತಿ
ಅವತರಿಸುತ ಬರೆ ಶಾಂತಿ
ನರ್ತಿಸು, ತಾಯೆ,
ಅಜ ಜಾಯೆ,
ಮಮ ಮಸ್ತಕ ನೀರೇಜದಲಿ!

೧-೮-೧೯೬೦

---

* ನಾಗಾಮಂಗಲದ ಮಹಾಜನರು ಅರ್ಪಿಸಿರುವ ನಾಟ್ಯ ಸರಸ್ವತಿಯ ದಿವ್ಯಸುಂದರವಾದ ಪಂಚಲೋಹ ವಿಗ್ರಹವನ್ನು ನಿರ್ದೇಶಿಸಿ, ದೇವೀ ಮೂರ್ತಿಯನ್ನು ನಿರ್ಮಿಸಿದ ಅಜ್ಞಾತಶಿಲ್ಪಿಗೆ ಕವಿಯ ಅನಂತ ಕೃತಜ್ಞತೆಯ ಫಲರೂಪವಾಗಿ.

# ಕಷ್ಟವಯ್ಯಾ ಹೊಗಲು ಕವಿಹೃದಯಕೆ

ಕಷ್ಟವಯ್ಯಾ ಹೊಗಲು ಕವಿಹೃದಯಕೆ

ನಷ್ಟವಿಲ್ಲದೆ ನಿನ್ನ ಮಮಕಾರಕೆ.

ದುಷ್ಟ ಮೃಗಗಳು ತುಂಬಿದಡವಿ ಸುತ್ತಿದೆ; ಮುಗಿಲು
ಮುಟ್ಟಿದಾ ಬೆಟ್ಟನೆತ್ತಿಯ ಮೇಲಿದೆ;
ದಟ್ಟಮಂಜಿನ ಗಡ್ಡೆ ಹೆಪ್ಪು ಗಟ್ಟಿದೆ; ನಿದ್ದೆ
ಕಟ್ಟೆಹಾಕಿದೆ; ಸದ್ದು ಹೆಣಬಿದ್ದಿದೆ!

ದುರ್ಗಮವೊ ಮಾರ್ಗವದು ಕವಿಯೆದೆಯ ಕಲ್ಗುಡಿಗೆ;
ಮೆಟ್ಟಿದರೆ ಪಥವೆಲ್ಲ ಮುಳ್ಳುಕಲ್ಲು.
ಕಂಟಕದ ಸಂಕಟವ ಕಳೆದು ಮೇಲೇರ್ದರೂ
ತಟ್ಟಿದೊಡನೆಯೆ ತೆರೆವ ಕದವದಲ್ಲ.

ಕತ್ತಲೆಯ ಗವಿಮಯ್ಯ ಕವಿಹೃದಯದಾ ಗುಹ್ಯ;
ಬಯಲು ಬತ್ತಲೆಗಣ್ಣಿಗದು ಅಸಹ್ಯ:
ಗವಿಯ ಬಾಯೆಡೆ ರಾಸಿ ಬಿಳಿಯೆಲ್ವು ಸುತ್ತಲೂ
ಬೆಚ್ಚಲಾಗಿದೆ ಮಂದಿ ಮುತ್ತದವೊಲು.

ಕಂಡ ಕಂಡರಿಗೆಲ್ಲ ಕಂಡಿ ತೋರುವುದಲ್ಲ;
ಕೊಂಡುಕೊಳಲೂ ಹಣಕೆ ಹವಣದಲ್ಲ.
ಕೆಲಸವಿಲ್ಲದ ಕೂತೂಹಲದ ಕಣ್ಣಿಗೆ ಅಲ್ಲಿ
ಕಲ್ಲಲ್ಲದಿನ್ನಾವ ದೇವರಿಲ್ಲ!

ಮೆಚ್ಚು ಮೆಯ್ ಜೋಡಾಗಿ, ಹೆಮ್ಮೆ ಕಾಲ್‌ಜೋಡಾಗಿ,
ಒದೆದರೂ ಒಲಿಯುವಾ ಮನಸು ಮಾಡಿ
ಏರುವಾ ಪ್ರೇಮವೀರಗೆ ಬೇರೆ ಮೋರೆಯನು
ತೋರುವುದು ತನ್ನೆದೆಯ ಸೂರೆ ನೀಡಿ!

೧೧-೫-೧೯೩೮

# ಪವಾಡ ಸಂದರ್ಶನ

೧

ಈ ಹೂವೂ ಪವಾಡವೆ!

* * *

ಶ್ರೀರಾಮಕೃಷ್ಣಾಶ್ರಮದಿ
ಶ್ರೀಮಾತೆ ಗುರುದೇವರಿದಿರಿನಲ್ಲಿ
ಪಡುಬಿದರೆ ಅಮ್ಮ
ಪ್ರಭುಶಂಕರನ ಕೈಲಿ
ಕುಂಕುಮವನಿಟ್ಟಂದು,
ತೆಕ್ಕನೆಯೆ,
ಬೆಳ್ಳಿ ವಿಗ್ರಹ ಬಂದು
ಬೆರಗಾದರಿನಿಬರೂ ಕುಂಭಕದಿ ನಿಂದು
ಅದ್ಭುತ ಪವಾಡ ಸಂದರ್ಶನಕ್ಕೆ!

೨

ಮನೆಯ ಉದ್ಯಾನದಲ್ಲಿ
ಅಗೆದಗೆದು ಹಸನು ಮಾಡಿದ ಈ ಮಣ್ಣಿನಲ್ಲಿ
ನೀರು ಗೊಬ್ಬರವಿಟ್ಟು
ಗೆಡ್ಡೆ ನಟ್ಟು
ಮೂಡಿದೀ ಡಾಲಿಯಾ ಗಿಡದ ಹಸುರು ಕೈಯಲ್ಲಿ
ಜಗದ ಅಮ್ಮ
ಬಿಸಿಲು ಗಾಳಿಯನಿಡಲು,
ಮೆಲ್ಲನೆಯೆ,
ಮೊಗ್ಗುಗಣ್ ತೆರೆತೆರೆಯ ತೆರೆದು,
ಅಲೆಅಲೆಯ ಕಡಲು ಈ ಹೂವು ಬಿಡಲು,
ನಾನಾದರ ದಿವ್ಯ ಸಾನ್ನಿಧ್ಯದಲಿ ಕೈಮುಗಿದು ನಿಂತು

ವಿಸ್ಮಯಾರಾಧನೆಯ ರಸಸಮಾಧಿಯನಾಂತು
ತೂಣಗೊಂಡಿಹೆನಿಂತು

ಮಹಾದ್ಭುತ ಪವಾಡ ಸಂದರ್ಶನಕ್ಕೆ!

* * * *

ಈ ಹೂವೂ ಪವಾಡವೆ!

೯-೧೦-೧೯೫೯

# ಪುಷ್ಪ ಭಗವಾನ್

೧

ಇದು ದರ್ಶನ:
ಇದು ಸಾಕ್ಷಾತ್ಕಾರ:
ಬರಿ ನೋಡುವುದಲ್ಲೊ!
ಈ ಅನುಭವಕಿನ್ನಾವುದು ಬೇರೆಯ ಹೆಸರಿಲ್ಲೊ!

೨

ಇದು ಬರಿ ಹೂಬಿಡುವಾ
ಸಾಮಾನ್ಯದ ಪ್ರಾಕೃತ ಸಂಗತಿಯಲ್ಲೊ!
ಭಾವಿಸಿ ಕಾಣ್:
ಈ ಹೂವಿನ ಭವ್ಯಾಕಾರ
ಸಾರುತ್ತಿದೆ ತನ್ನಷ್ಟಕೆ ತಾನ್:
“ನಾನ್ ಅವತಾರ!”

೩

ಈ ಉದ್ಯಾನದಿ
ಈ ಹೊತ್ತರೆಯಲಿ
ಈ ಹೂಬಿಸಿಲಲಿ
ಧ್ಯಾನದಿ ನಿಂತವಲೋಕಿಸಿದರೆ ಪ್ರತ್ಯಕ್ಷಂ
ಇದು ಮಹದವತಾರ!
ಇದನೀಕ್ಷಿಸುವುದೆ ಸಾಕ್ಷಾತ್ಕಾರ!
ಹೇ ಭಗವತ್ ಪುಷ್ಪಾಕಾರ,
ನಿನಗಿದೋ ನಮಸ್ಕಾರ!
ಸಾಷ್ಟಾಂಗ ನಮಸ್ಕಾರ!